ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜುಲೈ 2019
ಬೆಲೆ ರೂ. 1



## ಗಿರೀಶ್ ಕಾರ್ನಾಡ್ ಅವರಿಗೆ ಅಕ್ಷರ ನಮನ

# ಸಂಘದಲ್ಲಿ ಗಿರೀಶ್ ಕಾರ್ನಾಡ್



ಗಿರೀಶ್ ಕಾರ್ನಾಡ್ ಅವರಿಗೆ ಜ್ಞಾನಪೀಠ ಪ್ರಶಸ್ತಿ ಒಲಿದ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘ ಅವರನ್ನು ಅಭಿನಂದಿಸಿದ ಭಾವಚಿತ್ರ. ಅಂದಿನ ಅಧ್ಯಕ್ಷ ದಿ. ಕೆ.ಆರ್. ನಾಗರಾಜ್ ಮತ್ತು ಉಪಾಧ್ಯಕ್ಷೆ ದಿ. ಶ್ರೀಮತಿ ಜ್ಯೋತ್ಸ್ನಾ ರಾವ್ ಅವರನ್ನು ಕಾಣಬಹುದು. (1999)



ಗಿರೀಶ್ ಕಾರ್ನಾಡ್ ಅವರೊಂದಿಗೆ ಸಾಹಿತಿ ಪ್ರೊ. ಎಚ್.ಎಸ್. ಶಿವಪ್ರಕಾಶ್, ದಿ. ಎನ್.ಜೆ. ಕಾಮತ್, ದೆಹಲಿ ಕರ್ನಾಟಕ ಸಂಘದ ಅಂದಿನ ಅಧ್ಯಕ್ಷ ದಿ. ಕೆ.ಆರ್. ನಾಗರಾಜ್ ಮತ್ತು ಪದಾಧಿಕಾರಿಗಳು (1999).

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪುಟ 29 ಸಂಚಿಕೆ 10
ಜುಲೈ 2019

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

**ಮುಖಪುಟ ಚಿತ್ರ**
ದೆಹಲಿ ಕರ್ನಾಟಕ ಸಂಘದಲ್ಲಿ
1999ರಲ್ಲಿ ತೆಗೆದ
ಗಿರೀಶ್ ಕರ್ನಾಡ್
ಅವರ ಭಾವಚಿತ್ರ

## ಸಂಪಾದಕೀಯ

# ಗಣಿತಶಾಸ್ತ್ರದ ವಿದ್ಯಾರ್ಥಿ ಮುಂದೆ ಆಗಿದ್ದು ಅಪ್ರತಿಮ ನಾಟಕಕಾರ

ನಮ್ಮ ಶೈಕ್ಷಣಿಕ ಅರ್ಹತೆ ಮತ್ತು ನಾವು ಪಡೆಯುವ ಅಂಕಗಳು ನಮ್ಮ ಭವಿಷ್ಯವನ್ನು ನಿರ್ಧರಿಸುತ್ತದೆಯೇ?. ಬಹುತೇಕ ಸಂದರ್ಭದಲ್ಲಿ ಹೌದಾದರೂ ಎಲ್ಲರ ಬದುಕಿನಲ್ಲಿ ಅಲ್ಲ. ಬದುಕಿನ ಲೆಕ್ಕಾಚಾರವೇ ಬೇರೆ ಇರುತ್ತದೆ. ಈಚೆಗೆ ನಮ್ಮನ್ನು ಅಗಲಿದ ಮೇರು ಸಾಹಿತಿ ಗಿರೀಶ್ ಕಾರ್ನಾಡ್ ಅವರು ಗಣಿತಶಾಸ್ತ್ರದ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ಈ ಕಾರಣದಿಂದಲೇ ರೋಡ್ಸ್ ಸ್ಕಾಲರ್‌ಶಿಪ್ ಪಡೆದು ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಪಡೆದರು. ಆದರೆ ಭಾರತಕ್ಕೆ ಮರಳಿ ಬಂದು ಅಪ್ರತಿಮ ನಾಟಕಕಾರ ಎನಿಸಿಕೊಂಡರು. ಅಲ್ಲಿ ಕಲಿಯುತ್ತಿದ್ದಾಗಲೇ ಅವರಿಗಿದ್ದ ನಾಟಕದ ಗೀಳು ಮತ್ತು ತಮ್ಮ ಬದುಕನ್ನು ತಾನು ಬಯಸಿದಂತೆ ರೂಪಿಸಿಕೊಂಡ ಬಗೆಯಿಂದ ಅವರು ಮುಂದೆ ಭಾರತೀಯ ರಂಗಭೂಮಿಯ ಅಪ್ರತಿಮ ನಾಟಕಕಾರ ಎನಿಸಿಕೊಂಡರು. ನಾಟಕ ಸಾಹಿತ್ಯಕ್ಕೆ ಮೊದಲ ಬಾರಿಗೆ ಜ್ಞಾನಪೀಠ ಪ್ರಶಸ್ತಿ ಪಡೆದ ಹೆಗ್ಗಳಿಕೆಗೆ ಪಾತ್ರರಾದರು.

ಕಾರ್ನಾಡ್ ಅವರು ಪಡೆದ ಶೈಕ್ಷಣಿಕ ಅರ್ಹತೆ ಮತ್ತು ಜ್ಞಾನದಿಂದ ಜಗತ್ತಿನ ಪ್ರತಿಷ್ಠಿತ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ ಅಥವಾ ಉಪಕುಲಪತಿಗಳಾಗಿ ಕಾರ್ಯನಿರ್ವಹಿಸಬಹುದಿತ್ತು. ಆದರೂ ತಮ್ಮ ಪ್ರತಿಭೆಯಿಂದ ಪ್ರತಿಷ್ಠಿತ ಪುಣೆಯ ಫಿಲ್ಮ್ ಇನ್ಸ್ಟಿಟ್ಯೂಟ್, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಮೊದಲಾದ ಸಂಸ್ಥೆಗಳನ್ನು ಮುನ್ನಡೆಸಿದರು.



ಚಲನಚಿತ್ರವೊಂದರಲ್ಲಿ ದಿ. ವಿಷ್ಣುವರ್ಧನ್ ಜೊತೆ ಕಾರ್ನಾಡ್

ಕಾರ್ನಾಡರು ನಟನೆ, ನಿರ್ದೇಶನ, ಸಾಹಿತ್ಯ ಹೀಗೆ ತಮ್ಮ ವಿವಿಧ ಆಸಕ್ತಿಗಳ ಕ್ಷೇತ್ರಗಳಲ್ಲಿ ಶ್ರೇಷ್ಠತೆಯನ್ನು ಸಾಧಿಸಿದ್ದು ಅಸಾಮಾನ್ಯವೇ ಸರಿ. ತಾನು ಬಯಸಿದಂತೆ ಬದುಕಿದ ಕಾರ್ನಾಡ್ ಅವರು ತಮ್ಮ ಅನಿಸಿಕೆಗಳನ್ನೂ ತಾವು ಅಂದುಕೊಂಡಂತೆ ವ್ಯಕ್ತಪಡಿಸುತ್ತಿದ್ದರು. 'ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ಟಿಪ್ಪು ಸುಲ್ತಾನ್ ನಾಮಕರಣ ಹೆಚ್ಚು ಅರ್ಥಪೂರ್ಣ', 'ಪಂಡಿತ್ ಭೀಮ್‌ಸೇನ್ ಜೋಷಿ ಅಗಲಿಕೆಯಿಂದ ನಷ್ಟವೇನಿಲ್ಲ' ಎಂಬ ಅವರ ಹೇಳಿಕೆಗಳ ಮಾಧ್ಯಮ ವರದಿಗಳಿಂದ ಕೋಲಾಹಲವಾಗಿತ್ತು. ಆದರೂ ಕೊನೆವರೆಗೂ ಅವರು ತನ್ನತನವನ್ನು ಕಾಯ್ದುಕೊಂಡಿದ್ದರು.

'ವಿಭಿನ್ನತೆ' ಅವರ ಜೀವಿತದ ಉದ್ದಕ್ಕೂ ಕಂಡುಬಂದ ಅಂಶ. 'ತುಘಲಕ್' ನಾಟಕ ಇದಕ್ಕೆ ಒಳ್ಳೆಯ ಉದಾಹರಣೆ. ಇತಿಹಾಸದಲ್ಲಿ ಮೂರ್ಖ ರಾಜನಾಗಿ ಬಿಂಬಿತನಾಗಿದ್ದ ತುಘಲಕ್‌ನನ್ನು ಕಾರ್ನಾಡ್ ದೂರದೃಷ್ಟಿಯ ನಾಯಕನಾಗಿ ಕಾಣಿಸಿದರು ಎಂಬ ಪ್ರತಿಕ್ರಿಯೆಗಳು ಬಂದವು. ಈ ನಾಟಕ ದೇಶದ ಹಲವು ಭಾಷೆಗಳಲ್ಲಿ ಪ್ರದರ್ಶನಗೊಂಡಿತು. ಇದನ್ನು ರಚಿಸಿದಾಗ ಕಾರ್ನಾಡ್ ಅವರಿಗೆ ಕೇವಲ ಇಪ್ಪತ್ತೈದು ವರ್ಷ ಎನ್ನುವುದು ವಿಶೇಷ. ಈ ಬಗೆಯ ನಾಟಕಗಳಿಂದ ಭಾರತೀಯ ರಂಗಭೂಮಿಯಲ್ಲಿ ಹೊಸಬಗೆಯ ಚಿಂತನೆಗೆ ಅವಕಾಶ ಮಾಡಿಕೊಟ್ಟಿತ್ತು.

ಈ ಬಾರಿಯ ಅಭಿಮತದಲ್ಲಿ ಗಿರೀಶ್ ಕಾರ್ನಾಡ್ ಅವರ ಕುರಿತ ವಿಶೇಷ ಬರಹಗಳು, ನೆನಪಿಗಳ ಚಿತ್ರಗಳನ್ನು ಪ್ರಕಟಿಸುವ ಮೂಲಕ ಅವರಿಗೆ 'ಅಕ್ಷರ ನಮನ' ಸಲ್ಲಿಸುತ್ತಿದ್ದೇವೆ. ಭೌತಿಕವಾಗಿ ಗಿರೀಶ್ ಕಾರ್ನಾಡ್ ಅವರು ನಮ್ಮಿಂದ ದೂರವಾದರೂ ಅವರ ಅನನ್ಯ ನಾಟಕಗಳ ಮೂಲಕ ನಮ್ಮೊಂದಿಗೆ ಜೀವಂತವಾಗಿರುತ್ತಾರೆ.

*ಡಾ. ಅವನೀಂದ್ರನಾಥ್ ರಾವ್*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 29 ಸಂಚಿಕೆ 10
ಜುಲೈ 2019, ಬೆಲೆ ರೂ. 1

**ನಮ್ಮನಮ್ಮೊಳಗೆ**

# ಕಾರ್ನಾಡ: ಪರಂಪರೆ ಮತ್ತು ಅಧುನಿಕತೆಯ ಮುಖಾಮುಖಿಯಲ್ಲಿ

ನಮ್ಮನ್ನೆಲ್ಲ ಬಿಟ್ಟು ಜೂನ್ 10ರಂದು ಅಗಲಿದ ಗಿರೀಶ ಕಾರ್ನಾಡ ಕಳೆದ ಒಂದೆರಡು ವರ್ಷಗಳಿಂದ ಅಸ್ವಸ್ಥರಾಗಿದ್ದರು. ಆದರೂ ತಾವು ಹಾಕಿಕೊಂಡ ಯೋಜನೆಗಳ ಬಗ್ಗೆ ಮತ್ತು ಬರೆದು ಮುಗಿಸಬೇಕಾಗಿದ್ದ ನಾಟಕ ಕ್ರತಿಗಳ ಬಗ್ಗೆ ಅವರು ಇನ್ನೂ ತೀವ್ರವಾಗಿ ಯೋಚಿಸುತ್ತಿದ್ದರು ಮತ್ತು ತೊಡಗಿಸಿಕೊಂಡಿದ್ದರು. ಈ ಮಾತನ್ನು ಅವರೇ ಇತ್ತೀಚಿನ ಯಾವುದೋ ಪತ್ರಿಕಾ ಸಂದರ್ಶನದಲ್ಲಿ ಹೇಳಿದ ನೆನಪು. ಹಾಗೆ ನೋಡಿದರೆ ಅವರ ಎಂಬತ್ತೆರಡು ವಸಂತಗಳ ಜೀವನವೇ ಹಲವಾರು ಘಟನಾವಳಿಗಳ ಸರಮಾಲೆಯೆಂದರೆ ತಪ್ಪಾಗಲಾಗದು. ಅವರ 'ಆಡಾಡತ ಆಯುಷ್ಯ' ವಿಸ್ತೃತವಾದ ಆತ್ಮಕತೆಯನ್ನು (ಮನೋಹರ ಗ್ರಂಥಮಾಲೆ, 2011) ಓದಿದರೆ ಇದು ವೇದ್ಯವಾಗುತ್ತದೆ. ತಮ್ಮ ಸಂಕೀರ್ಣ ಜೀವನದ ಪುಟಗಳಲ್ಲಿ ಸೃಜನಶೀಲತೆಯನ್ನು ತುಂಬಿಸುವ ಅವರ ನಿರಂತರ ಪ್ರಯತ್ನ ಮತ್ತು ತೊಳಲಾಟ ಅತ್ಯಂತ ವಿಶಿಷ್ಟವಾದದ್ದೆಂದು ನನಗನಿಸುತ್ತದೆ. ಒಂದು ಬಗೆಯಲ್ಲಿ ಅವರ ಬದುಕಿನ ಹಲವಾರು ಘಟನಾವಳಿಗಳು ಒಟ್ಟಾರೆ ಕನ್ನಡ ಸಂಸ್ಕೃತಿಯು ಭಾರತದ ಮತ್ತು ಜಗತ್ತಿನ ಹಲವಾರು ಸಾಂಸ್ಕೃತಿಕ ಆಯಾಮಗಳೊಂದಿಗೆ ನಡೆಸಿದ ಸಂವಾದ ಹಾಗೂ ಮುಖಾಮುಖಿಯಂತೆ ತೋರುತ್ತದೆ. ಅವರ ನಾಟಕದ ಪಯಣ 1961ರಲ್ಲಿ ಯಯಾತಿಯೊಂದಿಗೆ ಪ್ರಾರಂಭವಾಗಿ ತುಘಲಕ್, ಹಯವದನ, ಅಂಜುಮಲ್ಲಿಗೆ ಅಗ್ನಿಮಳೆ, ನಾಗಮಂಡಲ, ಟಿಪ್ಪೂ ಸುಲ್ತಾನನ ಕನಸುಗಳು...ಹೀಗೆ ಈ ಪಟ್ಟಿ ತುಂಬ ದೊಡ್ಡದು. ಅವರ ನಾಟಕಗಳಲ್ಲಿ, ಬರಹಗಳಲ್ಲಿ ಮತ್ತು ಚಿಂತನೆಯಲ್ಲಿ ಭಾರತೀಯ ಪರಂಪರೆ ಮತ್ತು ಸಂಸ್ಕೃತಿಯೊಂದಿಗೆ ನಮ್ಮ ಇಂದಿನ ಬದುಕಿನ ಮಾನಸಿಕ ತೊಳಲಾಟಗಳನ್ನು ಕನ್ನಡಿಯಲ್ಲಿ ನಮ್ಮನ್ನು ನಾವೇ ನೋಡಿಕೊಳ್ಳುವ ಬಗೆಯ ಚಿತ್ರಣಗಳಿವೆ. ಹೀಗಾಗಿ ಕನ್ನಡದಲ್ಲಿ ಅವರು ಬರೆದ ಈ ಎಲ್ಲ ನಾಟಕ ಕೃತಿಗಳು ಭಾರತದ ಸ್ತರದಲ್ಲಿ ತುಂಬ ಸಲೀಸಾಗಿ ಪ್ರಸ್ತುತವಾಗಿಬಿಡುವ ಚಮತ್ಕಾರವನ್ನು ನಾವು ಕಾಣಬಹುದು. ಅವರ ಬಹುತೇಕ ಎಲ್ಲ ನಾಟಕಗಳು ಹಲವಾರು ಭಾರತೀಯ ಭಾಷೆಗಳಿಗೆ (ಮತ್ತು ಇತರ ವಿದೇಶಿ ಭಾಷೆಗಳಿಗೂ) ಅನುವಾದ ಹೊಂದಿ ಆಯಾ ಭಾಷೆಗಳ ಸೊಗಡಿಗೆ ಸುಲಲಿತವಾಗಿ ಒಗ್ಗಿಕೊಳ್ಳುವ ಪರಿಯನ್ನು ಕಂಡಾಗ ಅವರ ನಾಟಕಗಳ ವಸ್ತುವಿನ ವೈಶಾಲ್ಯತೆಯ ಮತ್ತು ವಿನೂತನೆಯ ಅರಿವಾಗುತ್ತದೆ.

ಸಾಮಾಜಿಕ ಜಾಲತಾಣಗಳಲ್ಲಿ ಅವರ ಜೀವನದ ಕುರಿತಾದ ವಿವರಗಳನ್ನು ಕೆದಕಿದಾಗ ಮೊದಲು ಅವರು ತಮ್ಮನ್ನು ಗುರುತಿಸಿಕೊಂಡದ್ದು ಕನ್ನಡದ ಬರಹಗಾರರೆಂದೆ. ನಂತರದಲ್ಲಿ ದೀರ್ಘವಾದ ಮತ್ತು ಸಂಯಮಶೀಲ ಚಲನಚಿತ್ರದ ನಂಟು ಅವರಿಗೆ ಇನ್ನಿಲ್ಲದ ಪ್ರಸಿದ್ಧಿಯನ್ನು ತಂದಿತು. ಕನ್ನಡದ 'ಸಂಸ್ಕಾರ'ದಿಂದ ಬೆಳೆದ ಈ ನಂಟು ಅವರನ್ನು ಹಿಂದಿ, ಮರಾಠಿ, ತೆಲಗು...ಹೀಗೆ ಹಲವಾರು ಭಾಷೆಗಳ ಚಲನಚಿತ್ರಗಳೊಂದಿಗೆ ಜೋಡಿಸಿದ್ದು ಅಕಸ್ಮಿಕವಲ್ಲ. 1940 ಹಾಗೂ 1950 ರ ದಶಕದಲ್ಲಿ ಮುಂಬೈ ಪ್ರಾಂತದಲ್ಲಿದ್ದ ಉತ್ತರ ಕರ್ನಾಟಕದ ಕನ್ನಡದೊಂದಿಗೆ ಮರಾಠಿಯನ್ನೂ ತನ್ನ ಉದರದಲ್ಲಿ ಅಷ್ಟೇ ಸುಗಮವಾಗಿ ಇರಿಸಿಕೊಂಡು, ಜೀರ್ಣಿಸಿಕೊಂಡು ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ಅವರು ನೀಡಿದ ಕೊಡುಗೆ ಅಪಾರ. ಕಾರ್ನಾಡರವರು ಈ ಪರಂಪರೆಯಲ್ಲಿ ಹಾದು ಬಂದವರು. ಕನ್ನಡ ಸಾಹಿತ್ಯದಿಂದ ಹಿಂದುಸ್ತಾನಿ ಗಾಯನದ ಉದ್ದಾಮ ಪಟುಗಳ ಪರಂಪರೆಯನ್ನು ಈ ಉತ್ತರ ಕರ್ನಾಟಕದ ಅದ್ಭುತವಾದ ಸೊಗಡು ಸೃಷ್ಟಿಸಿದೆ. ಈ ಮರಾಠಿ ಗಂಧವನ್ನು ಸೂಸುತ್ತ ವೈದ್ಯಕೀಯ ಸೇವೆಯಲ್ಲಿದ್ದ ತಮ್ಮ ತಂದೆ–ತಾಯಿಯವರೊಂದಿಗೆ ಉತ್ತರ ಕನ್ನಡದ ಶಿರಸಿಯಲ್ಲಿ ನಾಲ್ಕಾರು ವರುಷಗಳನ್ನು ಕಳೆದ ಕಾರ್ನಾಡರನ್ನು ಹಲವಾರು ಬಗೆಗಳಲ್ಲಿ ರೂಪಿಸಿ, ಕನ್ನಡದಲ್ಲಿ ಉಳಿಯುವಂತೆ ಮಾಡಿದ್ದೆ ಈ ಮಾರಿಕಾಂಬೆಯ ಊರು ಮತ್ತು ಮಾರಿಕಾಂಬಾ ಶಾಲೆ. ಆಗಿನ ದುರ್ಗಮವಾದ ಮಲೆನಾಡಿನಲ್ಲಿ ಹುದುಗಿಕೊಂಡಿದ್ದ ಶಿರಸಿ ಹೇಗೆ ತಮ್ಮ ಸಾಂಸ್ಕೃತಿಕ ಆಯಾಮಗಳನ್ನು ರೂಪಿಸಿತೆಂಬುದನ್ನು ಅವರು ತಮ್ಮ ಅತ್ಮಕತೆಯಲ್ಲಿನ ಮೊದಲ ಅಧ್ಯಾಯ 'ಶಿರಸಿ'ಯಲ್ಲಿ ವಿಸ್ತ್ರತವಾಗಿ ಬರೆದಿದ್ದಾರೆ. ತಮ್ಮ ಶಿರಸಿ ಕಾಲದಲ್ಲಿನ ಮಾರಿಕಾಂಬ ಶಾಲೆಯ ಪರಿಸರ, ಯಕ್ಷಗಾನ, ನಾಟಕ ಕಂಪನಿಗಳ ಪ್ರದರ್ಶನಗಳು ಮತ್ತು ಅಲ್ಲಿನ ದಟ್ಟ ಕಾಡಿನ ಜೀವನ ಅವರ ಮುಂದಿನ ಕನ್ನಡ ಸೃಜನಶೀಲ ಬರವಣಿಗೆಯ ಮೇಲೆ ಎಲ್ಲಿಲ್ಲದ ಪ್ರಭಾವವನ್ನು ಬೀರಿದವು. ನಂತರದಲ್ಲಿ ಪ್ರತಿಷ್ಠಿತ ರೊಡ್ಸ್ ವಿದ್ಯಾರ್ಥಿ ವೇತನ ಪಡೆದು (ಅದನ್ನು ಸಹ ಸಾಕಷ್ಟು ಮೊದಲೆ ಮತ್ತು ಮುತುವರ್ಜಿಯಿಂದ ಯೋಜಿಸಿಕೊಂಡು ಗಣಿತವನ್ನು ತೆಗೆದುಕೊಂಡು ಮೊದಲ ತರಗತಿಯಲ್ಲಿ ತೇರ್ಗಡೆಯಾಗುವಂತೆ ನೋಡಿಕೊಂಡು) ನಂತರದಲ್ಲಿ ವಿದೇಶಕ್ಕ ಹೋದರೂ ಅವರನ್ನು ಕನ್ನಡದಲ್ಲಿ ಬಿಡದೆ ಸಿಲುಕಿ ಹಾಕಿಸಿದ್ದು ಅವರ ಶಿರಸಿಯ ದಿನಗಳು. ಉತ್ತರ ಕನ್ನಡದ ದಾಂಡೇಲಿಯ ಪರಿಸರದಲ್ಲಿ ಅವರು ನಿರ್ದೇಶಿಸಿದ 'ಒಂದಾನೊಂದು ಕಾಲದಲ್ಲಿ' ನನ್ನ ಮಟ್ಟಿಗಂತೂ ಹಲವಾರು ಬಗೆಗಳಲ್ಲಿ ಅದ್ಭುತವಾದ ಚಿತ್ರ. ಅವರು ಶ್ಯಾಮ ಬೆನಗಲ್ ಅವರ ನಿರ್ದೇಶನದಲ್ಲಿ ನಟಿಸಿದ ಎಲ್ಲ ಚಿತ್ರಗಳು...ಮಂಥನ್, ಸ್ವಾಮಿ ಇತ್ಯಾದಿ.. ಈಗ ದಂತಕತೆಗಳಾಗಿವೆ. ಅವರ 'ಆನಂದ ಭೈರವಿ'ಯ ನೆನಪು ಕನ್ನಡಿಗರ ಹೃದಯದಲ್ಲಿದೆ. ಅವರು ನಿರ್ದೇಶಿಸಿದ ಕಾಡು, ತಬ್ಬಲಿಯು ನೀನಾದೆ ಮಗನೆ, ವಂಶವೃಕ್ಷ..ಎಲ್ಲವೂ ಪ್ರಶಸ್ತಿ ಪಡೆದ ಚಿತ್ರಗಳು.

ಈ ಎಲ್ಲ ಪ್ರಶಸ್ತಿಗಳ ಸರಮಾಲೆಯಲ್ಲಿ ಅವರು ತಮ್ಮ ವಿಚಾರಧಾರೆ ಮತ್ತು ಕಠಿಣ ನಿಲುವುಗಳನ್ನು ತಮ್ಮ ಅಂತಿಮ ಗಳಿಗೆಯವರೆಗೂ ಬದಲಾಯಿಸಲಿಲ್ಲ. ಅವರ ಈ ನೇರ ನಿಲವು ಅವರನ್ನು ಹಲವಾರು ಬಾರಿ ಬಿಕ್ಕಟ್ಟಿಗೆ ಸಿಲುಕಿಸಿದ್ದು ಇದೆ. ತಾವು ಕಂಡುಕೊಂಡದ್ದನ್ನು ಬರವಣಿಗೆಯಲ್ಲಿ ಇಳಿಸುತ್ತ, ನೇರ ನುಡಿ ಮತ್ತು ನಿಲುವುಗಳನ್ನು ಹೊಂದಿದ್ದ ಅವರು ದೆಹಲಿ ಕರ್ನಾಟಕ ಸಂಘಕ್ಕೆ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದ ಸಂಭ್ರಮದಲ್ಲಿ ಬಂದಿದ್ದರು. ಅಗಿನ ಸಂಘದ ಹಳೆಯ ಕಟ್ಟಡದಲ್ಲಿ ಅವರನ್ನು ಅಭಿನಂದಿಸುವ ಕಾರ್ಯಕ್ರಮದಲ್ಲಿ ಸಂಘದ ಗೌರವ ಕಾರ್ಯದರ್ಶಿಯಾಗಿ ಅವರನ್ನು ಸ್ವಾಗತಿಸುವ ಕೆಲಸ ನನ್ನದಾಗಿತ್ತು. ನಂತರದಲ್ಲಿ ಅವರು ಸಂಘಕ್ಕೆ ಮತ್ತೆ ಬಾರಿ ಬಾರಿ ಮರಳಿ ಬಂದ ನೆನಪು ಕಾಣುವುದಿಲ್ಲ. ಕನ್ನಡಕ್ಕೆ ತಮ್ಮನ್ನು ಅರ್ಪಿಸಿಕೊಂಡು ವೈಶಿಷ್ಟಪೂರ್ಣವಾದ ನಾಟಕಗಳನ್ನು ಬರೆದ ಈ ಸೃಜನಶೀಲ ಚೇತನಕ್ಕೆ ನಮನಗಳು.

***ಡಾ. ವೆಂಕಟಾಚಲ ಹೆಗಡೆ***
***ಅಧ್ಯಕ್ಷರು***

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ ಹಾಗೂ ಸದಸ್ಯರೇ ದೆಹಲಿ ಕರ್ನಾಟಕ ಸಂಘ ರಾಷ್ಟ್ರ ರಾಜಧಾನಿಯಲ್ಲಿ ತನ್ನದೇ ಆದ ಸಾಂಸ್ಕೃತಿಕ ಲೋಕದ ರಾಯಭಾರಿಯಾಗಿ ವಿಶ್ವದಲ್ಲೇ ಅತಿ ದೊಡ್ಡದಾಗಿ ಬೆಳೆದಿದೆ. ಇದಕ್ಕೆ ಮೂಲ ಕಾರಣಕರ್ತರು ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಸಮಿತಿಯ ಎಲ್ಲರೂ ತನ್ನ ಕೆಲಸಗಳನ್ನು ಮಾಡುತ್ತಾ ತಮ್ಮ ಬಿಡುವಿನ ಸಮಯದಲ್ಲಿ ಕರ್ನಾಟಕ ಸಂಘಕ್ಕೆ ಸೇವೆ ಮಾಡುತ್ತಾ ಬರುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘವು 1948ರಿಂದ ಇದುವರೆಗೂ ಅತ್ಯುತ್ತಮ ಕಾರ್ಯಕ್ರಮಗಳನ್ನು ಮಾಡುತ್ತ ತನ್ನದೇ ಆದ ಛಾಪನ್ನು ಮೂಡಿಸಿದೆ. ಇದಕ್ಕೆ ಸಹಕರಿಸಿದ ಅನೇಕ ಗಣ್ಯರುಗಳನ್ನು ನೆನೆಯುತ್ತಾ ಹೋದರೆ ಜಾಗ ಸಾಕಾಗದು.

ದೆಹಲಿಗೆ ತಮ್ಮ ಕೆಲಸ ಕಾರ್ಯಗಳಿಗೆ ಬಂದ ನಾವು ನಮ್ಮ ಕೆಲಸಗಳ ಒತ್ತಡದಲ್ಲಿಯೂ ಕನ್ನಡವನ್ನು ಕನ್ನಡೇತರರಿಗೆ ಕಲಿಸುವ ಕೆಲಸವನ್ನು ಮಾಡುತ್ತಿದ್ದೇವೆ. ಮುಖ್ಯವಾಗಿ ನಮ್ಮ ದೆಹಲಿ ಕನ್ನಡ ಶಾಲೆಯು ಒಂದರಿಂದ ಆರನೇ ತರಗತಿಯವರಿಗೆ ಸಾವಿರದ ಇನ್ನೂರು ಮಕ್ಕಳಿಗೆ ಕಡ್ಡಾಯವಾಗಿ ಕನ್ನಡವನ್ನು ಕಲಿಸುತ್ತಾ ಬಂದಿದೆ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಗುವುದಕ್ಕೆ ಕೆಲಸ ಮಾಡಿದ್ದೇವೆ. ರಾಷ್ಟ್ರ ರಾಜಧಾನಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುವಲ್ಲಿ ಕನ್ನಡ ಗಟ್ಟಿಯಾಗಿ ನಿಲ್ಲುವ ಕೆಲಸವನ್ನು ಮತ್ತು ನಮ್ಮ ಸಾಂಸ್ಕೃತಿಕ ಕಟ್ಟಡ ನಿಲ್ಲುವಲ್ಲಿ ಕೆಲಸ ಮಾಡಿದ ನಮ್ಮ ರಾಷ್ಟ್ರ ರಾಜಧಾನಿ ಕನ್ನಡಿಗರಿಗೆ ಧನ್ಯವಾದಗಳನ್ನು ಹೇಳಲೇಬೇಕು.

ಈ ವಿಷಯವನ್ನು ಇಲ್ಲಿ ಯಾಕೆ ಪ್ರಸ್ತಾಪಿಸುತ್ತಿದ್ದೇನೆ ಎಂಬುದಕ್ಕೆ ಒಂದು ಮುಖ್ಯ ಕಾರಣವಿದೆ. ದೆಹಲಿ ಕರ್ನಾಟಕ ಸಂಘವು ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಗುವ ವಿಚಾರದಿಂದ ಹಿಡಿದು ದೆಹಲಿಯಲ್ಲಿ ಸರ್. ಎಂ. ವಿಶ್ವೇಶ್ವರಯ್ಯ ಮೆಟ್ರೋ ಸ್ಟೇಷನ್, ಕನ್ನಡ ಅಧ್ಯಯನ ಪೀಠ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜೊತೆಗೆ ಸಂಘವು ಕನ್ನಡದಲ್ಲಿ ಬ್ಯಾಂಕಿಂಗ್ ಪರೀಕ್ಷೆಗಳನ್ನು ನಡೆಸಬೇಕು ಎಂದು ಮನವಿ ಸಲ್ಲಿಸಲು ಕೇಂದ್ರದ ಮಂತ್ರಿಗಳನ್ನು ಭೇಟಿಯಾಗಿದೆ. ಕೇಂದ್ರ ಸರ್ಕಾರ ಈಗ ಬ್ಯಾಂಕ್ ಸೆಕ್ಟರ್‌ಗಳಲ್ಲಿ ರೈಲ್ವೇ ಮುಂತಾದ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಬರೆಯಲು ಅವಕಾಶ ಮಾಡಿಕೊಟ್ಟಿದೆ. ಈ ಎಲ್ಲ ಕೆಲಸಗಳನ್ನು ನಾವು ನಮ್ಮ ಕನ್ನಡಕ್ಕಾಗಿ ದುಡಿಯುತ್ತಿದ್ದೇವೆ. ಕಳೆದ ಐದು ವರ್ಷದ ಹಿಂದೆ ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಬಸವರಾಜರವರು ಕರ್ನಾಟಕ ಸಂಘಕ್ಕೆ ಭೇಟಿ ನೀಡಿ ಸಂಘವು ಮಾಡುತ್ತಿರುವ ಎಲ್ಲ ಒಳ್ಳೆಯ ಕೆಲಸಗಳನ್ನು ಗಮನಿಸಿ ಸಂಘಕ್ಕೆ ಧನಸಹಾಯ ನೀಡುವುದಾಗಿ ಹೇಳಿದರು. ಇದರಿಂದಾಗಿ ಪ್ರತಿ ವರ್ಷ ಇಪ್ಪತ್ತೈದು ಲಕ್ಷದಂತೆ ಕರ್ನಾಟಕ ಸಂಘಕ್ಕೆ ಅನುದಾನ ಬರುತ್ತಿತ್ತು. ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿತ್ತು. ಪ್ರತಿ ವರ್ಷ ವರ್ಷವೂ ಮಾನ್ಯ ಸಂಸ್ಕೃತಿ ಇಲಾಖೆಯ ಸಚಿವರುಗಳು ಯಾವುದೇ ತಕರಾರು ಇಲ್ಲದೆ ಧನಸಹಾಯವನ್ನು ನೀಡುತ್ತಿದ್ದರು. ಆದರೆ ಈ ಬಾರಿ ನಮ್ಮ ಮನವಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸಿಲ್ಲ. ನಾವು ನಮ್ಮ ಕೆಲಸದ ಒತ್ತಡದಲ್ಲಿಯೂ ಕಳೆದ ಒಂದು ವರ್ಷದಿಂದ ಹತ್ತಾರು ಬಾರಿ ನಿರ್ದೇಶಕರನ್ನು ಭೇಟಿಯಾದರೂ ಅನುದಾನ ಬಿಡುಗಡೆಯಾಗಿಲ್ಲ. ಇದನ್ನು ಪರಿಶೀಲಿಸಬೇಕಾಗಿ ಮಾನ್ಯ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳಲ್ಲಿ ನನ್ನ ವಿಶೇಷ ಕೋರಿಕೆ. ಹೊರನಾಡ ಕನ್ನಡಿಗರ ಸಂಘದ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರು ರಾಷ್ಟ್ರ ರಾಜಧಾನಿಯಲ್ಲಿ ಕನ್ನಡ ಕಹಳೆಯನ್ನು ಊದುತ್ತಿರುವ ಈ ಸಂಘಕ್ಕೆ ತಾವು ವಿಶೇಷ ಅನುದಾನವನ್ನು ನೀಡಲೇ ಬೇಕೆಂಬುದು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಸಂಘದ ಕಾರ್ಯದರ್ಶಿಯ ನೆಲೆಯಲ್ಲಿ ನನ್ನ ಮನವಿ.

ದೆಹಲಿ ಕರ್ನಾಟಕ ಸಂಘಕ್ಕೆ ಎಲ್ಲ ಪಕ್ಷಗಳು ನಮಗೆ ಸಹಕಾರ ನೀಡುತ್ತಾ ಬಂದಿದೆ. ಇದು ಕೇವಲ ಯಾವುದೇ ಒಂದು ಪಕ್ಷದ ಹಿಂದೆ ಕೆಲಸ ಮಾಡುತ್ತಿಲ್ಲ. ಇದು ದೆಹಲಿಯ ಕನ್ನಡ ಪಕ್ಷವಾಗಿ ಬೆಳೆಯುತ್ತಿದೆ. ಸರ್ವ ಜನಾಂಗದ ಶಾಂತಿಯ ತೋಟ ಆಗಿರುವ ಈ ಸಂಘಕ್ಕೆ ತಾವೆಲ್ಲರೂ ಸಹಕರಿಸಬೇಕೆಂದು ನನ್ನ ಮನವಿ ಮತ್ತು ಕನ್ನಡ ಪ್ರೇಮಿಗಳು ಇದಕ್ಕೆ ಗಮನವನ್ನು ಹರಿಸಬೇಕೆಂಬುದು ನನ್ನ ಕಳಕಳಿಯ ಮನವಿ. ಧನ್ಯವಾದಗಳು.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

**ದೆಹಲಿ ಕರ್ನಾಟಕ ಸಂಘದಲ್ಲಿ**
**ತಿಂಗಳ ಕಾರ್ಯಕ್ರಮ**

# ಸಂಗೀತ ಸಂಜೆ

**ಜುಲೈ 14ರ ಭಾನುವಾರ । ಸಂಜೆ 5.00ಗಂಟೆಗೆ । ಸ್ಥಳ : ಸಂಘದ ಸಭಾಂಗಣ**

## ಹಿಂದೂಸ್ತಾನಿ ಗಾಯನ



ಕರ್ನಾಟಕ ರಾಜ್ಯೋತ್ಸವ
ಪ್ರಶಸ್ತಿ ಪುರಸ್ಕೃತ
**ಬಾಲಚಂದ್ರ ನಾಕೋಡ**

ಖ್ಯಾತ ಗಾಯಕಿ
**ಅರ್ಪಿತಾ ಜೋಷಿ**



**ಸರ್ವರಿಗೂ ಆದರದ ಸ್ವಾಗತ**

# ಅಗಲಿದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಗಿರೀಶ್ ಕಾರ್ನಾಡ್



ಖ್ಯಾತ ಸಾಹಿತಿ, ರಂಗಭೂಮಿ, ಸಿನಿಮಾ ನಟರೂ ಆಗಿದ್ದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಗಿರೀಶ್ ಕಾರ್ನಾಡ್ (81) ದಿನಾಂಕ 10.06.2019ರಂದು ನಿಧನರಾಗಿದ್ದಾರೆ. ಮಹಾನ್ ಪ್ರತಿಭೆ ಗಿರೀಶ್ ಕನ್ನಡದಲ್ಲಿ ನಾಟಕ ಸಾಹಿತ್ಯಕಾರರಾಗಿ, ರಂಗಭೂಮಿ ತಜ್ಞರಾಗಿ, ಚಲನಚಿತ್ರರಂಗದ ನಟರಾಗಿ ಹೆಸರಾಗಿದ್ದವರು.

ಕಾರ್ನಾಡರು 1934 ಮೇ 19ರಂದು ಮಹಾರಾಷ್ಟ್ರದ ಮಾಥೇರದಲ್ಲಿ ಜನಿಸಿದರು. ತಂದೆ ಡಾ. ರಘುನಾಥ್ ಕಾರ್ನಾಡ್, ತಾಯಿ ಕೃಷ್ಣಾ ಬಾಯಿ. ಶಿರಸಿಯಲ್ಲಿ ಪ್ರಾಥಮಿಕ ಶಿಕ್ಷಣ, ಧಾರವಾಡದ ಬಾಸೆಲ್ ಮಿಷನ್ ಹೈಸ್ಕೂಲಿನಲ್ಲಿ ಪ್ರೌಢಶಾಲಾ ಶಿಕ್ಷಣ ಪಡೆದ ಇವರು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಪದವಿ ಶಿಕ್ಷಣ ಮುಗಿಸಿದ್ದರು. ನಂತರ ಪ್ರತಿಷ್ಠಿತ ರೋಡ್ಸ್ ಸ್ಕಾಲರ್‌ಶಿಪ್ ಪಡೆದುಕೊಂಡು ಆಕ್ಸ್‌ಫರ್ಡಿನಲ್ಲಿ ಹೆಚ್ಚಿನ ವ್ಯಾಸಂಗ ಮಾಡಿದ ಕಾರ್ನಾಡರು ಆಕ್ಸ್ ಫರ್ಡಿನ ಡಿಬೇಟ್ ಕ್ಲಬ್ಬಿಗೆ ಅಧ್ಯಕ್ಷರಾಗಿ ಆಯ್ಕೆಯಾದ ಪ್ರಥಮ ಏಷಿಯನ್ ಎನಿಸಿಕೊಂಡಿದ್ದಾರೆ. ಚೆನ್ನೈನಲ್ಲಿ ವೃತ್ತಿಜೀವನ ಪ್ರಾರಂಭಿಸಿ ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಸಂದರ್ಶನ ಪ್ರಾಧ್ಯಾಪಕರಾಗಿ, ಇಂಗ್ಲೆಂಡಿನಲ್ಲಿ ನೆಹರೂ ಸೆಂಟರಿನ ಅಧ್ಯಕ್ಷರಾಗಿ, ಪೂನಾ ಫಿಲ್ಮ್ ಇನ್ಸ್ಟಿಟ್ಯೂಟಿನ ನಿರ್ದೇಶಕರಾಗಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ತಮ್ಮ 42ನೇ ವಯಸ್ಸಿನಲ್ಲಿ ಕೊಡಗಿನ ಡಾ. ಸರಸ್ವತಿ ಗಣಪತಿಯವರನ್ನು ವಿವಾಹವಾದ ಇವರಿಗೆ ಶಾಲ್ಮಲಿ ರಾಧಾ ಮತ್ತು ರಘು ಅಮಯ್ ಇಬ್ಬರು ಮಕ್ಕಳಿದ್ದಾರೆ.

ಮಾ ನಿಷಾಧ–ಏಕಾಂಕ ನಾಟಕ, ಯಯಾತಿ, ತುಘಲಕ್, ಹಯವದನ, ಅಂಜುಮಲ್ಲಿಗೆ, ಹಿಟ್ಟಿನ ಹುಂಜ ಅಥವಾ ಬಲಿ, ನಾಗಮಂಡಲ, ತಲೆದಂಡ, ಅಗ್ನಿ ಮತ್ತು ಮಳೆ, ಟಿಪ್ಪುವಿನ ಕನಸುಗಳು, ಒಡಕಲು ಬಿಂಬ, ಮದುವೆ ಅಲ್ಬಮ್, ಬೆಂದ ಕಾಳು ಆನ್ ಟೋಸ್ಟ ಇವು ಅವರ ಪ್ರಮುಖ ನಾಟಕಗಳು. 'ಆಡಾಡತ ಆಯುಷ್ಯ' ಅವರ ಆತ್ಮಕಥನ.

ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ಕಾಡು, ಒಂದಾನೊಂದು ಕಾಲದಲ್ಲಿ, ಕಾನೂರು ಹೆಗ್ಗಡತಿ, ಉತ್ಸವ್ ಮೊದಲಾದ ಚಿತ್ರಗಳನ್ನು ನಿರ್ದೇಶಿಸಿದ್ದ ಕಾರ್ನಾಡರು ಹಲವಾರು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಸೂಫಿ ಪಂಥ, ಕನಕ ಪುರಂದರ ಸಾಕ್ಷಚಿತ್ರಗಳನ್ನು ನಿರ್ದೇಶನ ಮಾಡಿದ್ದಾರೆ. ಬಹುಭಾಷಾ ಸಿನಿಮಾಗಳಲ್ಲಿ ಗಿರೀಶ್ ಕಾರ್ನಾಡ್ ನಟಿಸಿ ದೇಶದಲ್ಲಿ ದೊಡ್ಡ ಹೆಸರು ಮಾಡಿದ್ದರು.

ಹೀಗೆ ರಂಗಭೂಮಿ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಗಿರೀಶ್ ಕಾರ್ನಾಡ್ ಸಲ್ಲಿಸಿರುವ ಸೇವೆ ಪರಿಗಣಿಸಿ ಅನೇಕ ಪುರಸ್ಕಾರಗಳು ಲಭಿಸಿದೆ. ಅವುಗಳಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ–1974, ಪದ್ಮಭೂಷಣ–1992, ಜ್ಞಾನಪೀಠ–1998, ಕಾಳಿದಾಸ ಸಮ್ಮಾನ್–1998 ಪ್ರಮುಖವಾದವು.

**ಅಗಲಿದ ಮೇರು ಸಾಹಿತಿ ಗಿರೀಶ್ ಕಾರ್ನಾಡ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.**



**ಗಿರೀಶ್ ಕಾರ್ನಾಡ್ ಅವರು ಮಾಜಿ ಪ್ರಧಾನಿ ದಿ. ಅಟಲ್‌ಬಿಹಾರಿ ವಾಜಪೇಯಿ ಅವರಿಂದ ಜ್ಞಾನಪೀಠ ಪ್ರಶಸ್ತಿ ಸ್ವೀಕರಿಸಿದ ಸಂದರ್ಭ.**

# ಗಿರೀಶ್ ಕಾರ್ನಾಡ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ




ಅಗಲಿದ ಹಿರಿಯ ಸಾಹಿತಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಗಿರೀಶ್ ಕಾರ್ನಾಡ್ ಅವರಿಗೆ ದಿನಾಂಕ 07.07.2019ರಂದು ದೆಹಲಿ ಕರ್ನಾಟಕ ಸಂಘದಲ್ಲಿ 'ನುಡಿನಮನ' ಸಲ್ಲಿಸುವ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು. ಈ ಸಂದರ್ಭದಲ್ಲಿ ಭಾಗವಹಿಸಿದ ಹಿರಿಯ ಸಾಹಿತಿ ಖ್ಯಾತ ಚಲನಚಿತ್ರ ನಿರ್ದೇಶಕ ಶ್ರೀ ನಾಗತಿಹಳ್ಳಿ ಚಂದ್ರಶೇಖರ್ ಅವರು ಕಾರ್ನಾಡ್ ಅವರ ಜೊತೆಗಿನ ತಮ್ಮ ಸ್ನೇಹ, ಜಗಳ ಸೇರಿದಂತೆ ಒಡನಾಟವನ್ನು ಹಂಚಿಕೊಂಡರು. ಕನ್ನಡದಲ್ಲಿ ಹೊಸ ಅಲೆಯ ಚಿತ್ರಗಳನ್ನು ಕಾರ್ನಾಡ್ ಮೂಲಕ ನೋಡುವಂತಾಯಿತು. ಕನ್ನಡ ಸಾಹಿತ್ಯವನ್ನು ರಂಗಭೂಮಿ ಮತ್ತು ಸಾಹಿತ್ಯದ ಮೂಲಕ ಹೊಸ ಬಗೆಯಲ್ಲಿ ಅರ್ಥಮಾಡಿಕೊಳ್ಳಲು ಕಾರ್ನಾಡರಿಂದ ಸಾಧ್ಯವಾಯಿತು ಎಂದವರು ಅಭಿಪ್ರಾಯಪಟ್ಟರು. 'ಕಾಡು' ಸಿನಿಮಾದಿಂದ ತೊಡಗಿ ಈಚೆಗಿನ ಧಾರಾವಾಡ ಸಾಹಿತ್ಯ ಸಂಭ್ರಮದಲ್ಲಿ ಅವರೊಂದಿಗೆ ತಾವು ಕಂಡ ಅನುಭವವನ್ನು ಅವರು ವಿವರಿಸಿದ್ದು ತುಂಬಾ ಆಪ್ತವಾಗಿತ್ತು.



ಜೆ.ಎನ್.ಯು.ವಿನ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ ಸಾಹಿತಿ ಡಾ. ಪುರುಷೋತ್ತಮ ಬಿಳಿಮಲೆ ಮಾತನಾಡಿ ಇಂಗ್ಲೀಷ್‌ನಲ್ಲಿ ಪ್ರಭುತ್ವ ಹೊಂದಿದ್ದ ಕಾರ್ನಾಡರು ಕನ್ನಡದಲ್ಲೇ ಬರೆದು ಕನ್ನಡ ಸಾಹಿತ್ಯ ಮತ್ತು ಭಾರತೀಯ ರಂಗಭೂಮಿಯನ್ನು ಶ್ರೀಮಂತಗೊಳಿಸಿದರು. ರಂಗಭೂಮಿಯನ್ನು ಪ್ರಶ್ನೆ ಮಾಡುವುದನ್ನು ಕಾರ್ನಾಡರು ಕಲಿಸಿಕೊಟ್ಟರು ಎಂದು ಡಾ. ಬಿಳಿಮಲೆ ಅಭಿಪ್ರಾಯಪಟ್ಟರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಮಾತನಾಡಿ ಕಾರ್ನಾಡರು ಸಂಕೀರ್ಣ ವ್ಯಕ್ತಿತ್ವವನ್ನು ಹೊಂದಿದ್ದರೂ ಶ್ರೇಷ್ಠ ಸೃಜನಶೀಲ ಸಾಹಿತ್ಯವನ್ನು ನೀಡಿದ್ದು ಅನನ್ಯ ಸಾಧನೆಯಾಗಿದೆ. ಅವರ 'ಆಡಾಡತ ಆಯುಷ್ಯ' ಆತ್ಮಕತೆಯ ಬಹುದೊಡ್ಡ ಅಧ್ಯಾಯ ತನ್ನ ಹುಟ್ಟೂರಿನ ಶಿರಸಿ ಪ್ರದೇಶದ ಸುತ್ತ ಇರುವುದನ್ನು ಸ್ಮರಿಸಿಕೊಂಡರು. ಡಾ. ಹೆಗಡೆಯವರು ಈ ಹಿನ್ನೆಲೆಯಲ್ಲಿ ಶಿರಸಿ ಊರು ಕಾರ್ನಾಡರ ಮೇಲೆ ಬೀರಿದ ಪ್ರಭಾವವನ್ನು ಉಲ್ಲೇಖಿಸಿದರು.

ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಹಿರಿಯ ಕನ್ನಡತಿ ಡಾ. ಅಹಲ್ಯಾಚಿಂತಾಮಣಿ ಅವರು ತಾವು ಓದಿದ ಕಾರ್ನಾಡರ ಕೃತಿಗಳು ಮತ್ತು ನಾಟಕಗಳ ಕುರಿತು ಸ್ಮರಿಸಿಕೊಂಡರು. ಬೆಂಗಳೂರಿನ ಕರ್ನಾಟಕ ವಾರ್ತಾ ಇಲಾಖೆಯ ಮಾಜಿ ಜಂಟಿ ನಿರ್ದೇಶಕ ಶ್ರೀ ಶಿವರಾಮ್ ಪಾಲ್ಗೊಂಡಿದ್ದರು. ದೆಹಲಿ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿ ಕಾರ್ನಾಡರಿಗೆ ಪುಷ್ಪನಮನ ಸಲ್ಲಿಸಿದರು. •



**ಸಭೆಯಲ್ಲಿ ಮಾತನಾಡಿದ ಶ್ರೀ ನಾಗತಿಹಳ್ಳಿ ಚಂದ್ರಶೇಖರ್ ಮತ್ತು ಡಾ. ಪುರುಷೋತ್ತಮ ಬಿಳಿಮಲೆ.**

# ಕನ್ನಡದ ಬಹುಮುಖೀ ಪ್ರತಿಭೆ ಗಿರೀಶ್ ಕಾರ್ನಾಡ್

ಗಿರೀಶ್ ಕಾರ್ನಾಡ್ (19ಮೇ 1938– 10 ಜೂನ್ 2019) ಈಚೆಗೆ ತೀರಿಕೊಂಡಾಗ ಭಾರತ ಮಾತ್ರವಲ್ಲ ಪ್ರಪಂಚದ ಅನೇಕ ಕಡೆಗಳಲ್ಲಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಭಾರತದ ಬಹುತೇಕ ಎಲ್ಲ ಭಾಷೆಗಳಲ್ಲಿ ಅವರ ಬಗ್ಗೆ ಲೇಖನಗಳು ಪ್ರಕಟವಾದುವು. ದೇಶ ವಿದೇಶಗಳ ಪ್ರಸಿದ್ಧ ವಿದ್ವಾಂಸರು ಅವರ ಸಾಧನೆಗಳನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು. ದೆಹಲಿಯ ಪ್ರಸಿದ್ಧವಾದ ಇಂಡಿಯಾ ಇಂಟರ್ ನ್ಯಾಶನಲ್ ಸೆಂಟರ್‌ನಲ್ಲಿ ಜೂನ್ 17ರಂದು ಸಾಯಂಕಾಲ ಜೆ.ಎನ್.ಯು. ಕನ್ನಡ ಅಧ್ಯಯನ ಪೀಠ, ಜನನಾಟ್ಯ ಮಂಚ, ಸಹಮತ್ ಮೊದಲಾದ ಸಂಘಟನೆಗಳು ಜೊತೆಯಾಗಿ ಕಾರ್ನಾಡರಿಗೆ ಗೌರವ ಸೂಚಿಸುವ ಕಾರ್ಯಕ್ರಮವನ್ನು ಆಯೋಜಿಸಿದಾಗ ಸೇರಿದ ನೂರಾರು ಜನರು ಕಾರ್ನಾಡರಿಗೆ ಅಭೂತಪೂರ್ವ ಗೌರವ ಸಲ್ಲಿಸಿದರು. ಅಲ್ಲಿ ಮಾತಾಡಿದ್ದ ಪ್ರಖ್ಯಾತ ಲೇಖಕಿ ಗೀತಾ ಹರಿಹರನ್ ಅವರು 'ಇಂಗ್ಲಿಷನ್ನು ಅದ್ಭುತವಾಗಿ ಮಾಡಬಲ್ಲ ಕಾರ್ನಾಡರು ಬರೆಯಲು ಕನ್ನಡವನ್ನೇ ಆಯ್ದುಕೊಂಡರು ಎಂಬುದು ಬಹಳ ಮುಖ್ಯ' ಅಂದಾಗ ಕಾರ್ನಾಡರ ಮೂಲಕ ದೇಸೀ ಭಾಷೆಗಳಿಗೆ ಪ್ರಾಧಾನ್ಯ ಸಂದಂತಾಯಿತು. ಅಲ್ಲಿ ಮಾತಾಡಿದ್ದ ದೇಶದ ಇನ್ನೊಬ್ಬ ಪ್ರಖ್ಯಾತ ಲೇಖಕರಾದ ಶ್ರೀ ಅಶೋಕ ವಾಜಪೇಯಿ ಅವರು 'ಉತ್ಸವವೇ ಪ್ರಧಾನವಾಗಿದ್ದ ಭಾರತೀಯ ರಂಗಭೂಮಿಗೆ ಪ್ರಶ್ನೆ ಕೇಳಲು ಕಲಿಸಿದವರು ಕಾರ್ನಾಡರು' ಎಂದಾಗ ನನಗಂತೂ ರೋಮಾಂಚನವಾಗಿತ್ತು. ಪ್ರಖ್ಯಾತ ನಾಟಕ ನಿರ್ದೇಶಕರಾದ ಶ್ರೀ ಎಂ.ಕೆ. ರೈನಾ ಅವರು 'ಗಿರೀಶರ ಕನ್ನಡ ನಾಟಕಗಳು ಹಿಂದೀ ರಂಗಭೂಮಿಯ ವ್ಯಾಕರಣವನ್ನೇ ಬದಲಾಯಿಸಿದುವು' ಎಂದರು. ರಾಷ್ಟ್ರೀಯ ನಾಟಕ ಶಾಲೆಯ ಪೂರ್ವ ನಿರ್ದೇಶಕರಾದ ಶ್ರೀಮತಿ ಅನುರಾಧಾ ಕಪೂರ್ ಅವರು 'ಇತಿಹಾಸ ಮತ್ತು ಪುರಾಣಗಳು ಶಾಶ್ವತವೆಂದು ಡಂಗುರ ಬಾರಿಸುತ್ತಿರುವ ಹೊತ್ತಲ್ಲಿ ಕಾರ್ನಾಡರು ಅದರ ವಿರುದ್ಧ ದಿಕ್ಕಿನಲ್ಲಿ ಹೊರಟು ಅವೆಷ್ಟು ಫ್ಲೆಕ್ಸಿಬಲ್ ಎಂಬುದನ್ನು ತೋರಿಸಿಕೊಟ್ಟರು' ಅಂದು ಕಾರ್ನಾಡರನ್ನು ಶ್ಲಾಘಿಸಿದರು. ಕಾರ್ನಾಡರ ತಲೆದಂಡ ನಾಟಕವನ್ನು ವಿಶೇಷವಾಗಿ ಉಲ್ಲೇಖಿಸಿದ ಮಲೆಯಾಳಂ ಕವಿ ಸಚ್ಚಿದಾನಂದನ್ ಅವರು 'ಕನ್ನಡದ ಲೇಖಕರು ಇಷ್ಟೊಂದು ಶಕ್ತಿಶಾಲಿಗಳಾಗಲು ಅವರಿಗಿರುವ ವಚನ ಚಳುವಳಿಯ ಹಿನ್ನೆಲೆಯೇ ಕಾರಣ' ಎಂದು ವಿಶ್ಲೇಷಿಸಿದರೆ, ಖ್ಯಾತ ಕಲಾವಿದ ಶ್ರೀ ಟಿ.ಎಂ. ಕೃಷ್ಣ ಅವರು 'ಅತ್ಯುತ್ಕೃಷ್ಟವಾದ ಪ್ರಾಮಾಣಿಕ ಹುಡುಕಾಟವನ್ನು ಕೊನೆವರೆಗೆ ಕಾರ್ನಾಡರು ಉಳಿಸಿಕೊಂಡಿದ್ದರು, ಇದು ಸುಲಭವಾದ ಕೆಲಸವಲ್ಲ' ಎಂದು ಕೊಂಡಾಡಿದರು. ಈ ಸಂದರ್ಭದಲ್ಲಿ ಕಾರ್ನಾಡರ ಹಯವದನ, ಟಿಪ್ಪೂ ಸುಲ್ತಾನ್ ಮತ್ತು ತುಘಲಕ್ ನಾಟಕಗಳ ಆಯ್ದ ಭಾಗಗಳನ್ನು ಓದಿದ ಜನನಾಟ್ಯ ಮಂಚದ ಸದಸ್ಯರು 'ತುಘಲಕ್ ನಾಟಕವು ಭಾರತೀಯ ರಂಗಭೂಮಿಯ ಶಾಶ್ವತ ನಾಟಕಗಳಲ್ಲಿ ಒಂದು' ಎಂದು ಕೊಂಡಾಡಿದರು.

ಒಬ್ಬ ಲೇಖಕ ನಾಡು ನುಡಿಗೆ ಗೌರವ ತಂದುಕೊಡುವುದೆಂದರೆ ಹೀಗೆ. ಗಿರೀಶ್ ಕಾರ್ನಾಡರಿಂದ ಕರ್ನಾಟಕ, ಕನ್ನಡವು ವಿಶ್ವಖ್ಯಾತಿಯನ್ನು ಗಳಿಸಿತೆಂಬುದನ್ನು ನಾವು ಸದಾ ನೆನಪಲ್ಲಿ ಇಟ್ಟುಕೊಳ್ಳಬೇಕು. ಅವರದು ಬಹುಮುಖ ಪ್ರತಿಭೆ. ಅವರು ಅದ್ಭುತ ನಾಟಕಕಾರ, ಪ್ರಖರ ಚಿಂತಕ, ಹೋರಾಟಗಾರ, ಚಲನಚಿತ್ರ ನಟ, ಕಿರುತೆರೆಯ ನಟ, ನಿರ್ದೇಶಕ, ಚಿತ್ರಕಥಾಲೇಖಕ, ಭಾಷಾಂತರಕಾರ ಹಾಗೂ ಆಡಳಿತಗಾರ. ಅವರಿಗೆ ಕನ್ನಡ, ಇಂಗ್ಲೀಷ್, ಹಿಂದಿ, ಮರಾಠಿ, ತಮಿಳು, ಮಲೆಯಾಳಂ, ಕೊಂಕಣಿ, ತೆಲುಗು, ಪಂಜಾಬಿ, ತುಳು ಭಾಷೆಗಳ ಮೇಲೆ ಹಿಡಿತವಿತ್ತು. ಅವರ ನಾಟಕಗಳು ಭಾರತದ ಬಹುತೇಕ ಭಾಷೆಗಳಿಗೆ ಅನುವಾದಗೊಂಡು ಪ್ರದರ್ಶನಗೊಂಡಿವೆ. ಒಬ್ಬ ನಾಟಕಕಾರನಾಗಿ ಅವರಿಗೆ ಸಂದ ಜ್ಞಾನಪೀಠ ಪ್ರಶಸ್ತಿ ಕನ್ನಡಿಗರು ಮಾತ್ರವಲ್ಲ ಭಾರತೀಯ ನಾಟಕಕಾರರೆಲ್ಲರೂ ಹೆಮ್ಮೆ ಪಟ್ಟುಕೊಳ್ಳುವಂತಹದು. ಅವರು ಕೆಲಸ ಮಾಡಿದ ಎಲ್ಲಾ ಕ್ಷೇತ್ರಗಳಲ್ಲೂ ಅಸಾಮಾನ್ಯವಾದುದನ್ನೇ ಸಾಧಿಸಿದ್ದಾರೆ ಎಂಬುದು ಮಹತ್ವದ ವಿಚಾರ

**ಬದುಕು :** ಗಿರೀಶ ಕಾರ್ನಾಡ್‌ರು 1938 ಮೇ 19ರಂದು ಮಹಾರಾಷ್ಟ್ರದ ಮಾಥೇರಾನದಲ್ಲಿ ಜನಿಸಿದರು. ತಂದೆ ಡಾ. ರಘುನಾಥ್ ಕಾರ್ನಾಡ್, ತಾಯಿ ಕೃಷ್ಣಾ ಬಾಯಿ. ಪ್ರಗತಿಶೀಲ ಮನೋಭಾವದ ಡಾ. ರಘುನಾಥ ಕಾರ್ನಾಡರು ಮದುವೆಯಾದ ಹೊಸತರಲ್ಲೇ ಪತ್ನಿಯನ್ನು ಕಳೆದುಕೊಂಡರು. ಆಗ ಸಮಾಜದ ಬಹುದೊಡ್ಡ ವಿರೋಧದ ನಡುವೆಯೂ ವಿಧವೆ ಕೃಷ್ಣಾಬಾಯಿಯನ್ನು ಅವರು ಮದುವೆಯಾದರು. ಗಿರೀಶರ ಪ್ರಾಥಮಿಕ ಶಿಕ್ಷಣ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ, ಪ್ರೌಢಶಿಕ್ಷಣ ಧಾರವಾಡದ ಬಾಸೆಲ್ ಮಿಷನ್ ಹೈಸ್ಕೂಲಿನಲ್ಲಿ ಹಾಗೂ ಪದವಿ ಶಿಕ್ಷಣ ಕರ್ನಾಟಕ ಕಾಲೇಜಿನಲ್ಲಿ ಆಯಿತು. ಅವರು ಓದಿದ್ದು ಗಣಿತ ಶಾಸ್ತ್ರ. ಗಣಿತದಲ್ಲಿಯೇ ಹೆಚ್ಚಿನ ಅಭ್ಯಾಸ ನಡೆಸಲು ಅವರು ರೋಡ್ಸ್ ಶಿಷ್ಯವೇತನ ಪಡೆದುಕೊಂಡು ಆಕ್ಸ್‌ಫರ್ಡ್‌ನಲ್ಲಿ ಹೆಚ್ಚಿನ ವ್ಯಾಸಂಗಕ್ಕೆ ತೆರಳಿದರು. ಮುಂದೆ ಷಿಕಾಗೋ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿದರು. ಕನ್ನಡದ ಇನ್ನೊಬ್ಬ ಅಸೀಮ ಪ್ರತಿಭೆಯ ಲೇಖಕ ಎ ಕೆ ರಾಮಾನುಜನ್ ಅವರ ಗೆಳೆತನ ಕಾರ್ನಾಡರಿಗೆ ಸಿಕ್ಕಿದ್ದು ಷಿಕಾಗೋದಲ್ಲಿಯೇ. ತಮ್ಮ 42ರ ವಯಸ್ಸಿನಲ್ಲಿ ಕೊಡಗಿನ ವೀರಯೋಧ ಕೋದಂಡೇರ ಗಣಪತಿಯವರ ಪುತ್ರಿ ಡಾ. ಸರಸ್ವತಿ ಗಣಪತಿಯವರನ್ನು ಮದುವೆಯಾದ ಗಿರೀಶರಿಗೆ ಇಬ್ಬರು ಮಕ್ಕಳು, ಶಾಲ್ಮಲಿ ರಾಧಾ ಮತ್ತು ರಘು ಕಾರ್ನಾಡ್. ಪತ್ರಿಕೋದ್ಯಮಿಯಾಗಿ ಕೆಲಸ ಮಾಡುತ್ತಿರುವ ವಿಶಿಷ್ಟ ಪ್ರತಿಭೆಯ ರಘು ಕಾರ್ನಾಡರು ಎರಡನೇ ಮಹಾಯುದ್ಧದ ಕುರಿತಾದ ತಮ್ಮ ಕೃತಿಗೆ ಅಂತಾರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿದ್ದಾರೆ.

**ನಾಟಕಗಳು:** ಇಂಗ್ಲೆಂಡಿಗೆ ತೆರಳುವ ಮೊದಲೆ ಗಿರೀಶ ಕಾರ್ನಾಡರ ಮೊದಲ ನಾಟಕ ಕೃತಿ ಯಯಾತಿಯು (1961)ಧಾರವಾಡದ ಮನೋಹರ ಗ್ರಂಥಮಾಲೆಯಿಂದ ಪ್ರಕಟವಾಯಿತು. ಈ ನಾಟಕ ಪ್ರಕಟವಾದಾಗ ಕಾರ್ನಾಡರ ವಯಸ್ಸು ಕೇವಲ 23. ಇಂಗ್ಲೆಂಡಿನಿಂದ ಮರಳಿದ ಬಳಿಕ ತುಘಲಕ್ (1964), ಹಾಗೂ ಹಯವದನ (1972) ಪ್ರಕಟವಾದವು. ಈ ನಡುವೆ ಪುಣೆ ಫಿಲ್ಮ್ ಇನ್ಸ್ಟಿಟ್ಯೂಟ್‌ನ ನಿರ್ದೇಶಕರಾಗಿದ್ದು, ಮತ್ತೆ ಅದನ್ನು ಬಿಟ್ಟು ಮುಂಬಯಿಗೆ ಬಂದ ಕಾರ್ನಾಡರು ಕೆಲವು ಚಲನಚಿತ್ರಗಳಲ್ಲಿ ನಟಿಸಿದರು.



**'ಸ್ವಾಮಿ' ಚಿತ್ರದಲ್ಲಿ ನಟಿ ಶಬನಾ ಆಜ್ಮಿ ಜೊತೆ ಗಿರೀಶ್ ಕಾರ್ನಾಡ್**



**ಕಾರ್ನಾಡ್ ಅವರ 'ತುಘಲಕ್' ನಾಟಕದ ಒಂದು ದೃಶ್ಯ**

ಆ ರಂಗವನ್ನೂ ತ್ಯಜಿಸಿ ಮತ್ತೆ ಬೆಂಗಳೂರಿಗೆ ಬಂದರು. ಮುಂದೆ ಅವರು ಅಂಜು ಮಲ್ಲಿಗೆ (1977), ಹಿಟ್ಟಿನ ಹುಂಜ ಅಥವಾ ಬಲಿ (1980), ನಾಗಮಂಡಲ (1990), ತಲೆದಂಡ (1990), ಅಗ್ನಿ ಮತ್ತು ಮಳೆ (1995), ಟಿಪ್ಪುವಿನ ಕನಸುಗಳು (1997), ಒಡಕಲು ಬಿಂಬ (2005), ಮದುವೆ ಅಲ್ಬಮ್ (2009), ಫ್ಲಾವರ್ಸ (2012), ಮತ್ತು ಬೆಂದ ಕಾಳು ಆನ್ ಟೋಸ್ಟ (2012) ನಾಟಕಗಳನ್ನು ಬರೆದರು. ಈ ಎಲ್ಲಾ ನಾಟಕಗಳೂ ಭಾರತೀಯ ರಂಗಭೂಮಿಗೆ ಹೊಸ ವಸ್ತು, ಭಾಷೆ ಮತ್ತು ತಂತ್ರವನ್ನು ನೀಡಿದುವು. ಖ್ಯಾತ ಲೇಖಕರಾದ ಕರಣಂ ಪ್ರಸಾದ್ ಅವರು ಹೇಳುರುವಂತೆ– 'ಮುಖ್ಯವಾಗಿ ಗಮನಿಸಬೇಕಾದ ಅಂಶ, ನಾಟಕ ಎಂದರೆ ಸಂಭಾಷಣೆಯ ರಾಶಿ ಎಂಬಂಥ ಮನಸ್ಥಿತಿಯನ್ನು ಕಾರ್ನಾಡ್ ತಮ್ಮ ರಚನಾ ಕೌಶಲ್ಯದಿಂದ ತೆಗೆದರು. ನಾಟಕ ಕಟ್ಟುವ ಬಗೆಯನ್ನು ಅವರಿಂದ ಕಲಿಯಬೇಕು. ಸಂಸ್ಕೃತ ನಾಟಕದಿಂದ ಅವರು ಪಡೆದದ್ದು ಬಹಳ. ಯಯಾತಿ ನಾಟಕವನ್ನೇ ತೆಗೆದುಕೊಂಡರೆ ಅದರ ಪೂರ್ವರಂಗ, ಅಂಕ ವಿಭಜನೆ, ಪಾತ್ರ ಪೋಷಣೆ, ಎರಡೆರಡೇ ಪಾತ್ರದ ಘಟನೆ ಎಲ್ಲಾ ಸಂಸ್ಕೃತ ನಾಟಕದ ಮಾದರಿ. ಹಯವದನವನ್ನೇ ತೆಗೆದುಕೊಂಡರೆ ಥಾಮಸ್ ಮನ್ನನ 'ಟ್ರಾನ್ಸ್ ಫೋರ್ಮಡ್ ಹೆಡ್ಸ್' ಇಂದ ಪ್ರಭಾವಿತವಾದರು. ವಾತಾವರಣ ನಿರ್ಮಾಣ, ಕ್ಷೇತ್ರ ಆಯ್ಕೆ, ಪಾತ್ರ ಚಾರಿತ್ರ್ಯ, ಭಾಸನ, ಕಾಳಿದಾಸನ ನಾಟಕಗಳಿಂದ ತೆಗೆದುಕೊಂಡಿದ್ದಾರೆ. ಕೀರ್ತಿನಾಥ ಕುರ್ತಕೋಟಿಯವರಿಂದ ಸಂಸ್ಕೃತ ನಾಟಕಗಳ ಬಗ್ಗೆ ಸಾಕಷ್ಟು ತಿಳಿದೆ ಎಂದು ಅವರೇ ಹೇಳಿದ್ದಾರೆ. ಹೆಣ್ಣಿನ ಆಂತರ್ಯವನ್ನ ರಂಗದ ಮೇಲೆ ಕಟ್ಟಲು ಸಾಧ್ಯವಿಲ್ಲ ಎಂಬಂಥ ದುರ್ಭಿಕ್ಷ ಕಾಲದಲ್ಲಿ, ಹೆಣ್ಣಿನ ಪಾತ್ರವನ್ನು ಬೃಹತ್ ಪ್ರತಿಮೆಯಾಗಿ ಅವರು ಬಳಸಿದರು. ಯಯಾತಿಯಿಂದ ರಾಕ್ಷಸ ತಂಗಡಿವರೆಗೂ ಇದನ್ನು ಗಮನಿಸಬಹುದು. 'ಮನುಷ್ಯನ ಜೀವನ ಪಂಚಾಗದ ಮೇಲೆ ನಡೆಯುವುದಿಲ್ಲ, ನಾಡಿಯ ಸ್ಪಂದನದ ಮೇಲೆ ನಡೆಯುತ್ತದೆ ಯಯಾತಿಯ ಚಿತ್ರಲೇಖೆಯ ಮಾತು, 'ಬದುಕಲಿಕ್ಕೊಂದು ಭ್ರಾಂತಿ ಬೇಕಾಗಿರತದೆ, ಸುಲ್ತಾನರಿಗೂ ಇರತದೆ, ಪ್ರಜೆಗಳಿಗೂ ಇರತದೆ' ಎಂಬ ರಾಕ್ಷಸ ತಂಗಡಿಯ ಬೇಗಮ್ಮಳ ಮಾತು, ಇಂಥಾ ಪ್ರವಾದಿ ವಾಕ್ಯವನ್ನು ಅವರು ದೊಡ್ಡ, ಮುಖ್ಯ (ಗಂಡು) ಪಾತ್ರದಲ್ಲಿ ಹೇಳಿಸದೇ ಸಾಮಾನ್ಯ ಪಾತ್ರದಲ್ಲಿ ಹೇಳಿಸುತ್ತಾರೆ. ಮತ್ತು ಹೆಣ್ಣಿನ ಮಾತಲ್ಲಿ ಅದಕ್ಕೆ ಅರ್ಥ ಕೊಡಿಸುತ್ತಾರೆ. ಮದುವೆಯ ಆಲ್ಬಮ್ ನಾಟಕದಲ್ಲಿ ಈ ಸೂಕ್ಷ್ಮಗಳ ಒಟ್ಟು ರೂಪ ಇದೆ. ಕಾರ್ನಾಡ್ ಒಬ್ಬ ಪ್ರಬುದ್ಧ ನಟರು ಆಗಿದ್ದರಿಂದಲೇ ಅವರು ಉತ್ತಮ ನಾಟಕಕಾರರಾದರು ಎಂಬುದು ನನ್ನ ಸ್ಪಷ್ಟೋಕ್ತಿ, ಇದನ್ನು ಅಶ್ವಘೋಷನಿಗೂ, ಶೇಕ್ಸಪಿಯರನಿಗೂ ಅನ್ವಯಿಸಿಕೊಳ್ಳಬಹುದು. ಮತ್ತು ಬಿ.ವಿ. ಕಾರಂತ, ಅಲ್ಕಾಜಿ, ಸತ್ಯದೇವ್ ದುಬೆಯಂಥ ನಿರ್ದೇಶಕರು ಸಿಕ್ಕಿದ್ದರಿಂದ ಕಾರ್ನಾಡರ ನಾಟಕಗಳು ಹೊಳಪನ್ನು ಕಂಡವು ಎಂಬುದೂ ಸತ್ಯವೇ? (ಋತುಮಾನ, ಜೂನ್ 22, 2019)

ಆಡಾಡತ ಆಯುಷ್ಯ ಗಿರೀಶರ ಆತ್ಮಕತೆ

**ಚಲನಚಿತ್ರಗಳಲ್ಲಿ :** "ಸಂಸ್ಕಾರ" ಚಲನಚಿತ್ರವು ಕನ್ನಡದ ಪ್ರಥಮ ಕಲಾತ್ಮಕ ಚಲನಚಿತ್ರ. ಯು.ಆರ್. ಅನಂತಮೂರ್ತಿಯವರ ಕಾದಂಬರಿಯನ್ನು ಆಧರಿಸಿದ ಈ ಚಲನಚಿತ್ರದಲ್ಲಿ ಗಿರೀಶ ಕಾರ್ನಾಡರದು ಪ್ರಮುಖ ಪಾತ್ರ ಪ್ರಾಣೇಶಾಚಾರ್ಯರದು. ಇದು ಕನ್ನಡಕ್ಕೆ ಪ್ರಥಮ ಸ್ವರ್ಣಕಮಲವನ್ನು ತಂದು ಕೊಟ್ಟ ಚಿತ್ರ. ಆನಂತರ ಎಸ್.ಎಲ್. ಭೈರಪ್ಪನವರ ವಂಶವೃಕ್ಷ ಕಾದಂಬರಿಯನ್ನು ಆಧರಿಸಿ, ಬಿ. ವಿ. ಕಾರಂತರ ಜೊತೆಗೂಡಿ ವಂಶವೃಕ್ಷ ಚಿತ್ರವನ್ನು ನಿರ್ದೇಶನ ಮಾಡಿದರು. ಇದು ಹಲವಾರು ರಾಷ್ಟ್ರೀಯ, ಅಂತರರಾಷ್ಟ್ರೀಯ ಪುರಸ್ಕಾರ ಪಡೆಯಿತು. ಮುಂದೆ "ತಬ್ಬಲಿಯು ನೀನಾದೆ ಮಗನೆ", "ಕಾಡು", "ಒಂದಾನೊಂದು ಕಾಲದಲ್ಲಿ" ಚಿತ್ರಗಳನ್ನು ನಿರ್ದೇಶಿಸಿದರು. "ಕಾಡು" ಹಲವಾರು ಪ್ರಶಸ್ತಿ ಪುರಸ್ಕಾರ ಪಡೆಯಿತು. ಮುಂದೆ "ಉತ್ಸವ", "ಗೋಧೂಳಿ"ಎಂಬ ಹಿಂದಿ ಚಿತ್ರಗಳನ್ನು ನಿರ್ದೇಶಿಸಿದರು. ಬಳಿಕ ರಾಷ್ಟ್ರಕವಿ ಕುವೆಂಪು ಅವರ ಕಾನೂರು ಸುಬ್ಬಮ್ಮ ಹೆಗ್ಗಡಿತಿ ಕಾದಂಬರಿಯನ್ನು ಆಧರಿಸಿ "ಕಾನೂರು ಹೆಗ್ಗಡತಿ" ಚಿತ್ರವನ್ನು ನಿರ್ದೇಶಿಸಿದರು. ಈ ಚಿತ್ರವು ರಾಜ್ಯ ಹಾಗೂ ರಾಷ್ಟ್ರೀಯ ಪುರಸ್ಕಾರ ಪಡೆದು, ಪನೋರಮಕ್ಕೂ ಆಯ್ಕೆಯಾಯಿತು. ಇವುಗಳ ಜೊತೆಗೆ, ಕನಕ ಪುರಂದರ, ದ.ರಾ.ಬೇಂದ್ರೆ , ಸೂಫಿ ಪಂಥ ಸಾಕ್ಷ್ಯಚಿತ್ರಗಳನ್ನು, ಪರಿಸರ ವಿನಾಶ ಕುರಿತು ಚೆಲುವಿ ಎಂಬ ಕಿರುಚಿತ್ರವನ್ನು ಕಾರ್ನಾಡರು ನಿರ್ದೇಶಿಸಿದರು. ಟೈಗರ್ ಜಿಂದಾ ಹೆ (2017), ಶಿವಾಯ್ (2016), ಮುಗಮೂಡಿ (2012), ಏಕ್ ಥಾ ಟೈಗರ್ (2012), ಪುಲಿ (2010), ಇಕ್ಬಾಲ್ (2005), ಹೇ ರಾಮ್ (2000), ಪುಕಾರ್ (2000), ಕಾದಲನ್ (1994), ಸಂತ ಶಿಶುನಾಳ ಷರೀಫ (1990), ಸ್ವಾಮಿ (1977), ಮಂಥನ್ (1976), ನಿಶಾಂತ್ (1975) ಮೊದಲಾದ ಚಲನಚಿತ್ರಗಳಲ್ಲಿ ಕಾರ್ನಾಡರು ಅಭಿನಯಿಸಿದ್ದಾರೆ.

ಸಹಜವಾಗಿಯೇ ಕಾರ್ನಾಡರಿಗೆ ಅನೇಕ ಪ್ರಶಸ್ತಿಗಳು ಸಂದಾಯವಾಗಿವೆ. ಅವುಗಳಲ್ಲಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ, ಪದ್ಮಭೂಷಣ, ಜ್ಞಾನಪೀಠ, ಮತ್ತು ಕಾಳಿದಾಸ ಸಮ್ಮಾನ್ ಪ್ರಮುಖವಾದುವು.

1980ರಿಂದ ಕಾರ್ನಾಡರನ್ನು ನಾನು ವೈಯಕ್ತಿಕವಾಗಿ ಬಲ್ಲೆ. ಅವರು ತುಂಬ ಸ್ನೇಹ ಶೀಲರು. ಜೆ.ಎನ್.ಯು.ವಿನಲ್ಲಿ ಕನ್ನಡ ಪೀಠ ಆರಂಭವಾದಾಗ ತುಂಬ ಸಂತೋಷ ಪಟ್ಟು ಪತ್ರ ಬರೆದಿದ್ದರು. ಪುಸ್ತಕಗಳನ್ನು ಕಳಿಸಿದರೆ, ತಾವೇ ಪತ್ರ ಬರೆಯುತ್ತಿದ್ದರು. ಭಾರತದ ಬಹುಮುಖೀ ಸಂಸ್ಕೃತಿಯ ಬಗ್ಗೆ ಯಾವಾಗಲೂ ಉತ್ಸಾಹದಿಂದಲೇ ಮಾತಾಡುತ್ತಿದ್ದರು. ನಾನು ಬದುಕಿದ ಕಾಲಘಟ್ಟದ ಬಹುದೊಡ್ಡ ಪ್ರತಿಭೆ ಗಿರೀಶ್ ಕಾರ್ನಾಡರದು. ಅವರು ಭಾರತದ ಹೆಮ್ಮೆ.

***ಡಾ. ಪುರುಷೋತ್ತಮ ಬಿಳಿಮಲೆ***

# ಸಂಘದ ನೆನಪಿನ ಪುಟಗಳಲ್ಲಿ ಕಾರ್ನಾಡ್

ಗಿರೀಶ್ ಕಾರ್ನಾಡ್ ಅವರಿಗೆ ಜ್ಞಾನಪೀಠ ಪ್ರಶಸ್ತಿ ಬಂದ ಹಿನ್ನೆಲೆಯಲ್ಲಿ 1999ರಲ್ಲಿ ದೆಹಲಿ ಕರ್ನಾಟಕ ಸಂಘ ಕಾರ್ನಾಡರಿಗೆ ಅಭಿನಂದನೆ ಮತ್ತು ಅವರ ಕೃತಿಗಳ ವಿಚಾರ ಸಂಕಿರಣ ಆಯೋಜಿಸಿತ್ತು. ನಂತರ ಬೆಂಗಳೂರಿನ ಎಸ್.ಎಸ್.ಎಂ.ಆರ್.ವಿ. ಕಾಲೇಜಿನ ತಂಡ ಕಾರ್ನಾಡರ 'ಹಯವದನ' ನಾಟಕವನ್ನು ಪ್ರದರ್ಶಿಸಿತ್ತು.

ವಿಚಾರ ಸಂಕಿರಣವನ್ನು ಡಾ. ಟಿ.ಎಸ್. ಸತ್ಯನಾಥ್ ನಿರ್ವಹಿಸಿದ್ದರು. ಸಾಹಿತಿ ಪ್ರೊ. ಎಚ್.ಎಸ್. ಶಿವಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಡಾ. ಪುರುಷೋತ್ತಮ ಬಿಳಿಮಲೆ, ರಂಗಾಯಣದ ನಿರ್ದೇಶಕ ಬಸವಲಿಂಗಯ್ಯ ಮತ್ತು ಪ್ರಶಿಕ್ಷಕ ಗಂಗಾಧರ ಸ್ವಾಮಿ ಅವರು ವಿಚಾರ ಸಂಕಿರಣದಲ್ಲಿ ಮಾತನಾಡಿದ್ದರು. ಸಂಘದ ಸದಸ್ಯ ರಮೇಶ್ ಭಟ್ ಅವರು ನೀಡಿದ್ದ ಕಾರ್ಯಕ್ರಮದ ವಿವರವಾದ ವರದಿ ಸಂಘದ ಮುಖವಾಣಿ ಅಭಿಮತದಲ್ಲಿ ಪ್ರಕಟವಾಗಿತ್ತು. ಹಾಲಿ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅಂದು ಅಭಿಮತದ ಸಂಪಾದಕರು. ಅದರ ಆಯ್ದ ಪುಟಗಳು ಇಲ್ಲಿವೆ.

*–ಸಂಪಾದಕ*

## ದೆಹಲಿ ಕರ್ನಾಟಕ ಸಂಘದಲ್ಲಿ ಕಾರ್ನಾಡರಿಗೆ ಅಭಿನಂದನೆ



ಜ್ಞಾನಪೀಠ ಪ್ರಶಸ್ತಿ ವಿಜೇತ ಶ್ರೀ ಗಿರೀಶ್ ಕಾರ್ನಾಡರನ್ನು ಅಭಿನಂದಿಸುತ್ತಿರುವುದು.



ಕಾರ್ನಾಡರನ್ನು ಅಭಿನಂದಿಸುವ ಸಲುವಾಗಿ ಸೇರಿದ ಕನ್ನಡಿಗರು.

"ಬಂಕಿಮಚಂದ್ರ ಚಟರ್ಜಿ, ಠಾಗೋರ್ ಅಂಥವರು ಬರೆಯುತ್ತಿದ್ದ ಕಾಲದಲ್ಲಿ ತನ್ನ ಆರಂಭಿಕ ಸ್ಥಿತಿಯಲ್ಲಷ್ಟೇ ಇದ್ದಿದ್ದ ಆಧುನಿಕ ಕನ್ನಡ ಸಾಹಿತ್ಯ ನಂತರದ ಅತ್ಯಂತ ಚಿಕ್ಕ ಕಾಲಾವಧಿಯಲ್ಲಿ ದೇಶದ ಬೇರಾವುದೇ ಭಾಷೆಗಿಂತ ಹೆಚ್ಚಿನ ಅಂದರೆ ಏಳು ಜ್ಞಾನಪೀಠ ಪ್ರಶಸ್ತಿಗಳನ್ನು ಗಳಿಸಿರುವುದರಲ್ಲಿ ಈ ಭಾಷೆಯ ಶ್ರೀಮಂತಿಕೆಯ ಹಿನ್ನೆಲೆ ಇದೆ. ನನ್ನ ಯಶಸ್ಸಿನಲ್ಲಿ ನನ್ನ ಹಿಂದಿನವರೆಲ್ಲರ ಕೊಡುಗೆ ಇದೆ. ಹಾಗಾಗಿ ಈ ಪ್ರಶಸ್ತಿಯನ್ನು ನನ್ನ ಹಿರಿಮೆಯ ಅಳತೆಗೋಲಾಗಿ ನಾನು ಹಿಡಿಯುವಂತಿಲ್ಲ. ನನ್ನ ಸಮಕಾಲೀನ ಬರಹಗಾರರನೇಕರು ನನಗಿಂತ ಪ್ರತಿಭಾನ್ವಿತರು. ನನ್ನ ದೃಷ್ಟಿಯಲ್ಲಿ ಗೋಪಾಲ ಕೃಷ್ಣ ಅಡಿಗರು ರಾಷ್ಟ್ರಮಟ್ಟದ ಕವಿಗಳೇ ಆಗಿದ್ದರೂ ಅವರಿಗೆ ಈ ಪ್ರಶಸ್ತಿ ಸಿಗಲಿಲ್ಲ."

ದೆಹಲಿ ಕರ್ನಾಟಕ ಸಂಘ ಏರ್ಪಡಿಸಿದ್ದ ಅಭಿನಂದನಾ ಸಮಾರಂಭಕ್ಕೆ ಉತ್ತರಿಸುತ್ತ ಗಿರೀಶ್ ಕಾರ್ನಾಡರು ಮುಂದುವರಿದು ಸನ್ಮಾನ ಸಮಾರಂಭಗಳಿಗೆ ವಿಶೇಷ ಅರ್ಥವೇ ಇರಲಿಕ್ಕಿಲ್ಲ ಎಂದರು. ಈ ಕಾರ್ಯಕ್ರಮದ ನಂತರ ನಡೆಯಲಿದ್ದ ಅವರ ಕೃತಿಗಳ ವಿಚಾರ ಸಂಕಿರಣಕ್ಕೆ ಪ್ರತಿಕ್ರಿಯಿಸುತ್ತಾ, ವಿಚಾರ ಸಂಕಿರಣಗಳಿಗೆ ಬರಹಗಾರ ಬರಲೇ ಬಾರದು. ಸಂಕಿರಣಕ್ಕೆ ಬರಹಗಾರ ಬಂದರೆ ಆತನನ್ನ ಬೈಯುವ ಹಕ್ಕನ್ನು ನೀವು ಕಳೆದುಕೊಳ್ಳುತ್ತೀರಿ ಎಂದರು. ಇದಕ್ಕೆ ಮೊದಲು ಕಾರ್ನಾಡರನ್ನು ಅರ್ಥಪೂರ್ಣವಾಗಿ ಪರಿಚಯಿಸುತ್ತಾ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಕೆ.ಆರ್.ನಾಗರಾಜರವರು "ಕನ್ನಡ ಭಾರತಿಯ ಮೂಲಕ ದೆಹಲಿ ರಂಗ ಭೂಮಿಗೆ ಒಂದು ದೃಷ್ಟಿಯಲ್ಲಿ ಆದಿ ಪುರುಷರೇ ಆದ ಕಾರ್ನಾಡರನ್ನು ಸನ್ಮಾನಿಸುವಲ್ಲಿ ದೆಹಲಿ ಕನ್ನಡಿಗರಿಗೆ ಒಂದು ತೆರನಾದ ಹಕ್ಕಿದೆ. ಆದರೆ ಈ ದಿನ ಯಾವುದೇ ವಿಧ್ಯುಕ್ತ ಸಮಾರಂಭಗಳಿಗೆ ಬದಲಾಗಿ ಕನ್ನಡಕ್ಕೆ ಬಂದ ಏಳನೇ ಜ್ಞಾನಪೀಠದ ಸಂತೋಷವನ್ನು ಹಂಚಿಕೊಳ್ಳುವ ಸಡಗರವಷ್ಟೇ ಇದು" ಎಂದರು. ಕಾರ್ನಾಡರಿಗೆ ಶಾಲು ಹೊದಿಸಿ, ಸನ್ಮಾನಿಸುತ್ತಾ ನಾಗರಾಜರು "ಒಬ್ಬ ಸಾಹಿತಿಗೆ ನಾವು ಕೊಡುವ ಗೌರವ ಅವರಿಗೆ ಹಾಕುವ ಹಾರವಲ್ಲ, ಅವರ ಕೃತಿಯ ಅಧ್ಯಯನ; ಕೃತಿಗಾರನ ಸಂದೇಶವನ್ನು ಇನ್ನೂ ಹೆಚ್ಚಿನ ಜನರಿಗೆ ತಲುಪಿಸುವ ಪ್ರಕ್ರಿಯೆಯಲ್ಲಿದೆ" ಎಂದರು.

ಈ ಸನ್ಮಾನ ಸಮಾರಂಭದ ರೀತಿಯೇ ಬೇರೆಯಾಗಿತ್ತು. ಹೊಗಳುವಿಕೆಯ ಉದ್ದುದ್ದ ಭಾಷಣಗಳಿರಲಿಲ್ಲ. ಪ್ರಾಯಶಃ ಅದು ಕಾರ್ನಾಡರಿಗೂ ಹಿಡಿಸುತ್ತಿರಲಿಲ್ಲ. ಅದರ ಬದಲಾಗಿ, ಸಾಂಕೇತಿಕವಾಗಿ ಅವರನ್ನು ವೇದಿಕೆಯ ಮೇಲೆ ಕುಳ್ಳಿರಿಸಿ, ಸಂಘದ ನೆನಪಿನ ಕಾಣಿಕೆ ನೀಡಿ,

.......೬ನೆಯ ಪುಟಕ್ಕೆ

..............೧ನೆಯ ಪುಟದಿಂದ

ಶಾಲು ಹೊದೆಸಿ, ಕೇವಲ 10 ನಿಮಿಷಗಳಲ್ಲಿ ಕಾರ್ಯಕ್ರಮ ಮುಗಿಸಲಾಯಿತು, ಸುಮಾರು ಒಂದೂವರೆ ಗಂಟೆಯವರೆಗೆ



ಕಾರ್ನಾಡರ ಹಲವಾರು ನಾಟಕಗಳನ್ನು ಯಶಸ್ವಿಯಾಗಿ ನಿರ್ದೇಶಿಸಿದ ಶ್ರೀ ಯು.ಆರ್. ಪ್ರಭಾಕರ ರಾವ್ ಅವರಿಂದ ಸನ್ಮಾನ

ಕಾರ್ನಾಡರು ಕನ್ನಡಿಗರನ್ನು ನೋಡಿ ಪ್ರೀತಿಯಿಂದ ಮಾತನಾಡಿಸುತ್ತಲೇ ಇದ್ದರು. ಅಲ್ಲಿಗೆ ಬಂದ ಕನ್ನಡಿಗರೆಲ್ಲರಿಗೂ ಕಾರ್ನಾಡರ ಜೊತೆ ಮಾತನಾಡುವ ಅವಕಾಶ ಸಿಕ್ಕಿದ್ದು, ಎಲ್ಲರಿಗೂ ಸಂತೋಷ ತಂದಿತ್ತು.

## ರಂಗ ಗೀತೆಗಳು

ಗಿರೀಶ ಕಾರ್ನಾಡರವರು ಒಂದೆಡೆ ಕನ್ನಡಿಗರೊಡನೆ ಮಾತನಾಡುತ್ತಿದ್ದರೆ, ಹಲವಾರು ಮಂದಿ ಈ ಶುಭ ಸಂದರ್ಭದಲ್ಲಿ ಅವರೊಡನೆ ಭಾವಚಿತ್ರವನ್ನು ತೆಗೆಸಿಕೊಳ್ಳುತ್ತಿದ್ದರು. ೧೦ ವರ್ಷ ಪ್ರಾಯದ ಕುಮಾರಿ ರಕ್ಷಾ ಹಾಡೊಂದು ಹಾಡುವಂತೆ ಸೂಚಿಸಲಾಯಿತು. ಅವಳ ಮಧುರ ಗಾಯನ ಕೇಳಿದ ಶ್ರೀ ಕಾರ್ನಾಡರು ಅವಳ ಬೆನ್ನುತಟ್ಟಿ ಪ್ರೋತ್ಸಾಹಿಸಿದರು. ಬೆಂಗಳೂರಿನ ಎಸ್. ಎಸ್. ಎಂ. ಆರ್.



ಎಸ್. ಎಸ್. ಎಂ. ಆರ್. ವಿ. ಕಾಲೇಜಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ - ರಂಗಗೀತೆಗಳು

ವಿ. ಕಾಲೇಜಿನ ವಿದ್ಯಾರ್ಥಿಗಳು ರಂಗಗೀತೆಗಳನ್ನು ಪ್ರಸ್ತುತ ಪಡಿಸಿದರು. ಸುಮಾರು 30 ನಿಮಿಷಗಳ ಕಾಲ ನಡೆದ ಕಾರ್ಯಕ್ರಮ, ಸಮಯೋಚಿತವಾಗಿತ್ತು.

## ವಿಚಾರ ಸಂಕಿರಣ

ಅವರ ಮಾತನ್ನು ಸಮರ್ಥಿಸುವಂತೆ ಲಘು ಉಪಹಾರದ ನಂತರ ನಡೆದ ವಿಚಾರ ಸಂಕಿರಣ ನಿರಾತಂಕವಾಗಿ ಕಾರ್ನಾಡರ ಮತ್ತು ಅವರ ಸಾಹಿತ್ಯದ ಒಳಗನ್ನು ಬಿಚ್ಚಿಡುತ್ತಾ ಸನ್ಮಾನದ ಕಲ್ಪನೆಗೆ ಹೊಸ ಆಯಾಮವನ್ನು ಕೊಟ್ಟಿತು. ಕಾರ್ನಾಡರ ಕೃತಿಗಳ ಬಗ್ಗೆ ವಿಚಾರ ಸಂಕಿರಣದ ನಿರ್ವಾಹಕ ಶ್ರೀ ಟಿ.ಎಸ್.ಸತ್ಯನಾಥ್‌ರವರು ಹಯವದನ ನಾಟಕದ ದೇವದತ್ತನ ಬೌದ್ಧಿಕತೆ ಮತ್ತು ಕಪಿಲನ ದೇಹ ಸಾಮಾರ್ಥ್ಯದ



ಅಧ್ಯಕ್ಷ ಶ್ರೀ ಕೆ. ಆರ್. ನಾಗರಾಜ ಅವರು ಶ್ರೀ ಎಚ್. ಎಸ್. ಶಿವಪ್ರಕಾಶರನ್ನು ಸ್ವಾಗತಿಸುತ್ತಿರುವುದು



ಶ್ರೀ ಗಿರೀಶ್ ಕಾರ್ನಾಡರವರ ನಾಟಕಗಳ ಕುರಿತಾದ ವಿಚಾರ ಸಂಕಿರಣ

ನಡುವೆ ಪದ್ಮಿನಿಯ ಮಿಡಿಯೇಟಿಂಗ್ ಬಗ್ಗೆ ಹೇಳುತ್ತಾ, ಎಲ್ಲೋ ಕಾರ್ನಾಡರ ಪರಕಾಯ ಪ್ರವೇಶದ ಮತ್ತು ವೈರುಧ್ಯದ ಹೊಳಹು ಕೊಟ್ಟು ಇಡಿಯ ವಿಚಾರ ಸಂಕಿರಣಕ್ಕೆ ಒಂದು ಚೌಕಟ್ಟು ಕಲ್ಪಿಸಿಕೊಟ್ಟರು.

ರಂಗಾಯಣದ ನಿರ್ದೇಶಕ ಬಸವಲಿಂಗಯ್ಯ ವಿಚಾರ ಸಂಕಿರಣದ ಮೊದಲ ತಾರ್ಕಿಕ ವೈರುಧ್ಯದ ವಿಚಾರವನ್ನು ಮಂಡಿಸುತ್ತಾ ಕೆಲವು ಮಹತ್ವಪೂರ್ಣ, ವಿಶ್ಲೇಷಣಾರ್ಹ ಸಂಗತಿಗಳನ್ನು ಎತ್ತಿಕೊಂಡರು.

೧) ಕಾರ್ನಾಡರ ವಸ್ತು ಎಲ್ಲಿಂದಲೊ ಎರವಲು ತಂದಿರುವುದು ಯಾಕೆ? ಅವರು ಸ್ವತಂತ್ರ ಕಲ್ಪಿತ ನಾಟಕ ಕಟ್ಟಲಾರರೇ? ೨) ಅಗ್ನಿ ಮತ್ತು ಮಳೆಯಲ್ಲಿ ಸಂಸ್ಕೃತಿಯ ಎರಡು ಮುಖಗಳ ಮುಖಾಮುಖಿ ಇದೆ.

......೬ನೆಯ ಪುಟಕ್ಕೆ

# ಶರಾವತಿ ಕನ್ನಡ ಸಂಘದಲ್ಲಿ ಕಾರ್ನಾಡರಿಗೆ ಶ್ರದ್ಧಾಂಜಲಿ

ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಶರಾವತಿ ಕನ್ನಡ ಸಂಘವು ದಿನಾಂಕ 26.06.2019ರಂದು ಗಿರೀಶ್ ಕಾರ್ನಾಡರಿಗೆ ಶ್ರದ್ಧಾಂಜಲಿ ಅರ್ಪಿಸಿತು. ಕಾರ್ಯಕ್ರಮದ ಆರಂಭದಲ್ಲಿ ಎಲ್ಲರನ್ನೂ ಆರಂಭಿಸಿದ ಸಂಘದ ಅಧ್ಯಕ್ಷರಾದ ಶ್ರೀ ಸುಂದರೇಶ್ ಅವರು ಕಾರ್ನಾಡರ ಬದುಕಿನ ಅನೇಕ ವಿವರಗಳನ್ನು ನೀಡಿ, ತಾನು ಯಯಾತಿ ಓದಿದ ಅನುಭವಗಳನ್ನು ವಿವರಿಸಿದರು. ಸಂಘದ ಹಿಂದಿನ ಅಧ್ಯಕ್ಷರಾದ ಡಾ. ರಂಜಿತ್ ರೆಬೆಲ್ಲೋ ಅವರು ಮಾತಾಡಿ, ಶೈಕ್ಷಣಿಕ ವಲಯಗಳಲ್ಲಿ ಕಾರ್ನಾಡರಿಗೆ ಗೌರವ ಸಂದ ಹಾಗೆ ಕನ್ನಡದ ಇತರ ಲೇಖಕರಿಗೆ ಸಂದದಿರುವ ಬಗ್ಗೆ ವಿಷಾದ ಪ್ರಕಟಿಸಿದರು. ಸಂಶೋಧಕ ಶ್ರೀ ಅಶೋಕ ಅವರು ಮಾತಾಡಿ, ಕಾರ್ನಾಡರ ಮುಕ್ತ ಚಿಂತನೆಯ ಕ್ರಮಗಳನ್ನು ಶ್ಲಾಘಿಸಿದರು.

ಈ ಕಾರ್ಯಕ್ರಮದಲ್ಲಿ ಹಾಜರಿದ್ದ ಹಿರಿಯ ಪ್ರಾಧ್ಯಾಪಕಿ ಪ್ರೊ. ಪರಿಮಳ ರಾವ್ ಅವರು ಮಾತಾಡಿ, ಬಹಳ ಸಂಪ್ರದಾಯಸ್ಥ ಮನೆಯಲ್ಲಿ ಹುಟ್ಟಿದ ತಾನು ಅನಂತ ಮೂರ್ತಿ ಅವರ ಸಂಸ್ಕಾರವನ್ನು ಓದಿ ಹೇಗೆ ಬದಲಾದೆ ಎಂಬುದನ್ನು ವಿವರಿಸಿ, ಗಿರೀಶರ ಪ್ರಾಣೇಶಾಚಾರ್ಯ ಪಾತ್ರದ ಅಭಿನಯವನ್ನು ನೆನಸಿಕೊಂಡರು. ಇನ್ನೊಬ್ಬರು ಪ್ರಾಧ್ಯಾಪಕಿ ಪ್ರೊ. ರೀಟಾ ಸೋನಿ ಅವರು ತಾವು ಬೆಂಗಳೂರಿನಲ್ಲಿ ಓದುತ್ತಿದ್ದಾಗ ಕಾರ್ನಾಡರ ಕೈಯಿಂದ ಬಹುಮಾನ ಸ್ವೀಕರಿಸಿದ ಸುಂದರ ಘಟನೆಯನ್ನು ನೆನೆಸಿಕೊಂಡರು. ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕ ಪುರುಷೋತ್ತಮ ಬಿಳಿಮಲೆ ಅವರು ಮಾತಾಡಿ 'ಸ್ವಾತಂತ್ರ್ಯೋತ್ತರ ಭಾರತದ ನೆಹರೂ ಕಾಲದ ಕನಸು ಮತ್ತು ವಾಸ್ತವಗಳನ್ನು ಕಾರ್ನಾಡರು, ತಮ್ಮ ಸೃಜನಶೀಲ ಕೃತಿಗಳಲ್ಲಿ ಹಿಡಿದಿಟ್ಟ ರೀತಿ ಅಸಾಮಾನ್ಯವಾದು, ಇತಿಹಾಸ, ಪುರಾಣ ಮತ್ತು ಜಾನಪದವನ್ನು ಅವರು ಆಧುನೀಕರಿಸಿದ ರೀತಿ ನಮಗೆಲ್ಲ ಹೊಸ ಹಾದಿಗಳನ್ನು ತೆರೆದು ತೋರಿಸಿತು ಎಂದು ಹೇಳಿ ಕಾರ್ನಾಡರ ಜೊತೆಗಿನ ತಮ್ಮ ಒಡನಾಟದ ಕ್ಷಣಗಳನ್ನು ಸ್ಮರಿಸಿಕೊಂಡರು.



ಈ ಸಂದರ್ಭದಲ್ಲಿ ಕನ್ನಡ ಅಧ್ಯಯನ ಪೀಠದ ವತಿಯಿಂದ ಕಾರ್ನಾಡರ ಕೃತಿಗಳ ಪ್ರದರ್ಶನವನ್ನು ಶ್ರೀ ಕೃಷ್ಣಮೂರ್ತಿ ಹಾಗೂ ವಿಶ್ವನಾಥ್ ಚೌಹಾನ್ ಏರ್ಪಡಿಸಿದ್ದರು. •

# ಮರೆಯಾದ ಸಾಹಿತ್ಯ, ರಂಗಭೂಮಿಗೆ ಕೊಡುಗೆ ನೀಡಿದ ಡಿ.ಕೆ. ಚೌಟ

ಇದೇ ಜೂನ್ 19ರಂದು ನಿಧನರಾದ ಡಿ ಕೆ ಚೌಟರು ಬದುಕು ಕಟ್ಟಲು ಹೊರನಾಡಿಗೆ ಹೋಗಿ ಮತ್ತೆ ತಮ್ಮ ತಾಯ್ನಾಡಿಗೆ ಬಂದು ಕಲೆ, ಸಾಹಿತ್ಯ, ರಂಗಭೂಮಿ, ಕೃಷಿ, ಉದ್ಯಮ ಮೊದಲಾದ ಕ್ಷೇತ್ರಗಳಲ್ಲಿ ಕೊಡುಗೆ ನೀಡಿದ ಮಹಾನುಭಾವರು. ಈಗ ಕೇರಳದಲ್ಲಿರುವ ಮಂಜೇಶ್ವರದ ಮೀಯಪದವಿನ ದರ್ಬೆ ಮನೆತನದಲ್ಲಿ 1938ರ ಜೂನ್ 1ರಂದು ಜನಿಸಿದ ದರ್ಬೆ ಕೃಷ್ಣಾನಂದ ಚೌಟ ಅವರು ಬಾಲ್ಯದಿಂದಲೇ ಚಿತ್ರಕಲೆ ಮತ್ತು ರಂಗಭೂಮಿಯಲ್ಲಿ ಅಪಾರ ಆಸಕ್ತಿ ಹೊಂದಿದ್ದರು. 1955ರಲ್ಲಿ ಉದ್ಯೋಗ ನಿಮಿತ್ತ ಅವರು ಆಫ್ರಿಕಾದತ್ತ ಪ್ರಯಾಣ ಬೆಳೆಸಿದರು. ಘಾನಾ, ನೈಜೀರಿಯಾ ಮೊದಲಾದೆಡೆ 25 ವರ್ಷ ಇದ್ದು 1980ರಲ್ಲಿ ಅವರು ಭಾರತಕ್ಕೆ ಮರಳಿದರು.

ಅವರು 'ಆನಂದ ಕೃಷ್ಣ' ಎಂಬ ಕಾವ್ಯನಾಮದಿಂದ ಕನ್ನಡ ಮತ್ತು ತುಳು ಭಾಷೆಗಳಲ್ಲಿ ನಾಟಕ ಮತ್ತು ಕಾದಂಬರಿಗಳನ್ನು ರಚಿಸಿದ್ದಾರೆ. ಅವರ ಮಿತ್ತಬೈಲ್ ಯಮುನಕ್ಕೆ, ಕರಿಯ ವಜ್ಜೆರೆನ ಕಥೆಕುಲು, ಪಿಲಿಪತ್ತಿ ಗಡಸ್, ಮೂಜಿ ಮುಟ್ಟು ಮೂಜಿ ಲೋಕ, ಪಟ್ಟು ಪಜ್ಜೆಲು, ದರ್ಮೆತ್ತಿ ಮಾಯೆ ಪ್ರಮುಖ ಕೃತಿಗಳಾಗಿವೆ. ಅವರಿಗೆ ತುಳು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಅಲ್ಲದೇ ಮಂಗಳೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಕೂಡಾ ದೊರೆತಿದೆ.

ಬೆಂಗಳೂರಿನ ಚಿತ್ರಕಲಾ ಪರಿಷತ್‌ನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಖ್ಯಾತ ರಂಗಕರ್ಮಿ ಸಿಜಿಕೆಯವರೊಂದಿಗೆ ಚೌಟ ಅವರು ಬೆಂಗಳೂರಿನ ರಂಗ ನಿರಂತರ ತಂಡದೊಂದಿಗೆ ರಂಗಭೂಮಿಯ ಮಹತ್ವದ ಕಾರ್ಯಗಳನ್ನು ಮಾಡಿರುವರು. ತುಳು ಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಬೇಕು ಎಂಬ ಅಭಿಲಾಷೆಯನ್ನು ಹೊಂದಿದ್ದ ಡಾ. ಚೌಟ



ಅವರು ಆಂಗ್ಲ ಮತ್ತು ಹಿಂದಿ ಭಾಷೆಗಳ ಮೂಲಕ ಬಂದಿರುವ ಏಕ ಮಾದರಿಯ ಶಿಕ್ಷಣ ಕ್ರಮವು ಸಾಹಿತ್ಯ, ಸಂಗೀತ, ಚಿತ್ರಕಲೆ, ರಂಗಭೂಮಿಗಳ ಮೇಲೆ ಗಂಭೀರ ಪರಿಣಾಮ ಬೀರಿದೆ. ದಕ್ಷಿಣ ಭಾರತದ ಎಲ್ಲಾ ಭಾಷೆಗಳೂ ತಮ್ಮ ಭಾಷೆಯನ್ನುಳಿಸುವ ದೃಷ್ಟಿಯಲ್ಲಿ ಒಟ್ಟಾಗಿ ಹೋರಾಡುವ ಅಗತ್ಯವಿದೆ ಎನ್ನುತ್ತಿದ್ದರು. ಅವರ ಬದುಕು ಎಲ್ಲರಿಗೂ ಸ್ಫೂರ್ತಿದಾಯಕವಾದುದು.

*ಬಾಲಕೃಷ್ಣ ನಾಯ್ಕ್ ಡಿ.*
*ಚೆನ್ನೈ*

# ಪರಿಸರ ಕಾಳಜಿ ಮೂಡಿಸಿದ ದೆಹಲಿ ಕಲಾವಿದರ ರಂಗಾಭಿವ್ಯಕ್ತಿ



ವಿಶ್ವಪರಿಸರ ದಿನಾಚರಣೆ ಅಂಗವಾಗಿ ದೆಹಲಿಯ 'ದಿನಕರ ಫೌಂಡೇಶನ್ (ರಿ)' ವತಿಯಿಂದ ದಿನಾಂಕ 9.6.2019ರಂದು ಪ್ರದರ್ಶನಗೊಂಡ 'ಫಿಲ್ಟರ್ ಮರುಳಯ್ಯಾ ಇದು ಫಿಲ್ಟರ್ ಮರಳೋ' ಪರಿಸರ ಕಾಳಜಿ ಮೂಡಿಸುವಲ್ಲಿ ಯಶಸ್ವಿಯಾಯಿತು. ಈ ನಾಟಕ ದೆಹಲಿ ಕರ್ನಾಟಕ ಸಂಘದಲ್ಲಿ ಪ್ರದರ್ಶನಗೊಂಡಿತು.

ಪರಿಸರ ತಜ್ಞ, ಲೇಖಕ ನಾಗೇಶ ಹೆಗಡೆಯವರು ಬರೆದ ನಾಟಕವನ್ನು ರಂಗದ ಮೇಲೆ ತಂದು ವಿಶಿಷ್ಟ ರೀತಿಯಲ್ಲಿ ಬೆಳಕು ಮತ್ತು ವಿನ್ಯಾಸದೊಂದಿಗೆ ನಿರ್ದೇಶಿಸಿದವರು ರಂಗ ನಿರ್ದೇಶಕ ಶ್ರೀ ಶಿವಾನಂದ ಇಂಗಳೇಶ್ವರ.

ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಮರಗಿಡಗಳನ್ನು ಕಡಿಯುತ್ತಾ ಪರಿಸರವನ್ನು ಹಾಳುಗೆಡವುತ್ತಾನೆ. ಮುಖ್ಯವಾಗಿ ಈ ನಾಟಕದಲ್ಲಿ ಮರಳು ಪರಿಸರ ಮತ್ತು ಕೆಲವು ಜೀವಿಗಳ ರಕ್ಷಣೆಯಲ್ಲಿ ನಿರ್ವಹಿಸುವ ಪಾತ್ರವನ್ನು ವಿವರಿಸಲಾಗಿದೆ. ಊರಲ್ಲಿ ಪ್ರಬಲವಾದ ಭದ್ರಯ್ಯ ಮುಗ್ಧ ಹಳ್ಳಿಗರನ್ನು ಮರ ಕಡಿಯಲು ಬಳಸುತ್ತಾನೆ. ಊರ ಮಹಿಳೆಯರು ಇದನ್ನು ಪ್ರತಿಭಟಿಸುತ್ತಾರೆ. ಸಂಭಾಷಣೆ ಮತ್ತು ಹಾಡಿನ ಮೂಲಕ ಜಾಗೃತಿ ಮೂಡಿಸುವ ನಿರ್ದೇಶಕರ ಪರಿಕಲ್ಪನೆ ವಿಶಿಷ್ಟವಾಗಿ ಅಭಿವ್ಯಕ್ತಿಗೊಂಡಿದೆ.

ಪಾತ್ರವರ್ಗದಲ್ಲಿ ಕೃಷ್ಣರಾಜ ಕೆ.ಎನ್., ಸುಧೀರ್ ಫಡ್ನೀಸ್, ಸವಿತಾ ನೆಲ್ಲಿ, ಕುಮಾರ್ ಎಸ್., ಅಮರೇಶ್, ಹರಿಪ್ರಿಯಾ ಎಸ್., ಬಿ.ಕೆ. ಬಸವರಾಜ್, ಜಯಶ್ರೀ ಬಸವರಾಜ್, ವಿದ್ಯಾ ಭಟ್, ಲೀಲಾ ದೇವರಾಜ್, ತಿಲಕ್ ಡಿ'ಸೋಜಾ, ಪ್ರದೀಪ, ಚಿರಂತನ್ ನಾರಾಯಣ, ಅವನಿ ನೆಲ್ಲಿ, ಋತ್ವಿಕ್ ನೆಲ್ಲಿ, ಜಯರಾಜ್, ರಿಶಿ ಶರಣ್, ಜಯಶ್ರೀ, ಭಾಗ್ಯಶ್ರೀ, ಡಿಯೋನ್ ಸೆಲಿಸ್ಟನ್, ಎ.ಟಿ. ಶ್ರೀನಿವಾಸ, ಸಂತೋಷ್ ಕುಮಾರ್ ಉಪಾಧ್ಯಾಯ ಇವರು ಸಂದರ್ಭೋಚಿತವಾಗಿ ನಟಿಸಿ ಗಮನ ಸೆಳೆದರು.

ಸಂತೋಷ್ ಕುಮಾರ್ ಉಪಾಧ್ಯಾಯ, ಹರಿಪ್ರಿಯಾ. ಎಸ್ ಮತ್ತು ರಾಘವೇಂದ್ರ ನಾಯ್ಕ್ ಅವರು ತಾಂತ್ರಿಕ ಸಹಕಾರ ನೀಡಿದರು.

ಮೈಲಾರಪ್ಪ ಟಿ. ಎಂ. ಮತ್ತು ಸುಧೀರ್ ಫಡ್ನೀಸ್ ಅವರು ಪ್ರಸಾಧನ, ಸಂಗೀತ ಮತ್ತು ರಂಗ ಪರಿಕರದಲ್ಲಿ ಹರ್ಷ ಹೆಗಡೆ, ವಿದ್ಯಾ ಸಾಲೀಮಠ, ಸುಧೀರ್ ಫಡ್ನೀಸ್, ಅಮರೇಶ್ ಸಹಕರಿಸಿದರು.





ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರು ನಿರ್ದೇಶಕರು ಮತ್ತು ಕಲಾವಿದರನ್ನು ಅಭಿನಂದಿಸಿದರು. ಅವರು ದಿನಕರ ತಂಡದ ಪರಿಸರ ಕಾಳಜಿಯನ್ನು ಶ್ಲಾಘಿಸಿ ಕನ್ನಡ ಸಾಹಿತ್ಯದಲ್ಲಿ ಬಂದ ಡಾ. ಬಿ.ಜಿ.ಎಲ್. ಸ್ವಾಮಿ ಅವರ 'ಹಸಿರು ಹೊನ್ನು' ಸೇರಿದಂತೆ ಪರಿಸರಪರ ಕೃತಿಗಳನ್ನು ಸ್ಮರಿಸಿದರು. ಸುಮಾರು ಮೂವತ್ತು ಮಂದಿ ದೆಹಲಿಯ ಕಲಾವಿದರು ಬೇಸಿಗೆ ಸೆಖೆಯನ್ನು ಲೆಕ್ಕಿಸದೆ ಪ್ರದರ್ಶನ ನೀಡಿದ್ದರು. •



# ಸಿ.ಬಿ.ಎಸ್.ಇ. ಪರೀಕ್ಷೆಯಲ್ಲಿ ಉನ್ನತ ಅಂಕ ಪಡೆದವರು

ಈ ಬಾರಿಯ ಅಂದರೆ 2018-19ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ದೆಹಲಿ ಮತ್ತು ಎನ್.ಸಿ.ಆರ್. ಪ್ರದೇಶದಲ್ಲಿ ವ್ಯಾಸಂಗ ಮಾಡುತ್ತಿದ್ದ ಕನ್ನಡದ ವಿದ್ಯಾರ್ಥಿಗಳು ಶೇಕಡಾ ತೊಂಬತ್ತಕ್ಕಿಂತಲೂ ಅಧಿಕ ಅಂಕ ಗಳಿಸಿದ್ದಾರೆ.

ಈ ಎಲ್ಲಾ ವಿದ್ಯಾರ್ಥಿಗಳಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು. ವಿವರ ಇಂತಿದೆ.

**ರಜತ್ ಗೋಸಲ್**



ಶ್ರೀಮತಿ ಲಲಿತಾ ಗೋಸಲ್ ಮತ್ತು ಶ್ರೀ ಮಂಜುನಾಥ್ ಗೋಸಲ್ ಅವರ ಪುತ್ರ ಹತ್ತನೇ ತರಗತಿಯಲ್ಲಿ 92.2% ಅಂಕವನ್ನು ಪಡೆದಿರುತ್ತಾರೆ.

**ಕು. ಪ್ರೇರಣಾ ರಾವ್**



ಶ್ರೀಮತಿ ಪೂಜಾ ರಾವ್ ಮತ್ತು ಶ್ರೀ ಪ್ರದೀಪ್ ರಾವ್ ಅವರ ಪುತ್ರಿ ಹತ್ತನೇ ತರಗತಿಯಲ್ಲಿ 90% ಅಂಕವನ್ನು ಪಡೆದಿರುತ್ತಾರೆ.

**ಕು. ಶ್ರದ್ಧಾ ಆರ್. ಭಟ್**



ಶ್ರೀಮತಿ ಸುಮಲತಾ ಕೆ ಮತ್ತು ಶ್ರೀ ರಾಮಕೃಷ್ಣ ಎನ್. ಅವರ ಪುತ್ರಿ. ಹನ್ನೆರಡನೇ ತರಗತಿಯಲ್ಲಿ 91.6% ಅಂಕವನ್ನು ಪಡೆದಿರುತ್ತಾರೆ.

# ಪ್ರತಿಭಾವಂತ ವಿದ್ಯಾರ್ಥಿಗಳು ಪಡೆದ ಶೇಕಡವಾರು ಗಳಿಕೆ

| ವಿದ್ಯಾರ್ಥಿ | ತರಗತಿ | ಶೇಕಡ ಅಂಕ |
|---|---|---|
| 1. **ಕ್ಷಿತಿಜ್ ಎಸ್.**<br>ಶ್ರೀಮತಿ ರೂಪಶ್ರೀ ಮತ್ತು ನರಸಿಂಹಮೂರ್ತಿ ಅವರ ಪುತ್ರ | 10 | 96.2% |
| 2. **ಕು. ತೀಕ್ಷ್ಣ ಜೆ.**<br>(ಡಾ. ನಂದಿನಿ ಕೆ.ಇ. ಮತ್ತು ಡಾ. ಜಗದೀಶ್ ಆರ್. ಎಸ್. ಅವರ ಪುತ್ರಿ) | 10 | 96% |
| 3. **ಪ್ರವೀಣ್ ಕಡಕೋಳ**<br>(ಶ್ರೀಮತಿ ಲಕ್ಷ್ಮೀ ಕಡಕೋಳ ಮತ್ತು ಶ್ರೀ ಪೀರಪ್ಪ ಕಡಕೋಳ ಅವರ ಪುತ್ರ) | 10 | 93% |
| 4. **ರಜತ್ ಗೋಸಲ್**<br>(ಶ್ರೀಮತಿ ಲಲಿತಾ ಗೋಸಲ್ ಮತ್ತು ಶ್ರೀ ಮಂಜುನಾಥ್ ಗೋಸಲ್ ಅವರ ಪುತ್ರ) | 10 | 92.2% |
| 5. **ಕು. ನಿತ್ಯಶ್ರೀ ಎ.**<br>(ಡಾ. ರೂಪಶ್ರೀ ಮತ್ತು ಡಾ. ಅಶೋಕ ಎಂ. ಈಟಿ ಅವರ ಪುತ್ರಿ) | 10 | 92.2% |
| 6. **ಕು. ವರ್ಷಾ ಕಿಣಿ**<br>(ಶ್ರೀಮತಿ ಲಕ್ಷ್ಮೀ ಕಿಣಿ ಮತ್ತು ಶ್ರೀ ಮಂಜುನಾಥ ಕಿಣಿ ಅವರ ಪುತ್ರಿ) | 10 | 90% |
| 7. **ಓಜೋ ಮುರಗೋಡ**<br>(ಶ್ರೀಮತಿ ಸುಮಿತಾ ಮುರಗೋಡ ಮತ್ತು ಶ್ರೀ ಆನಂದ ಮುರಗೋಡ ಅವರ ಪುತ್ರ) | 10 | 90% |
| 8. **ಕು. ಪ್ರೇರಣಾ ರಾವ್**<br>(ಶ್ರೀಮತಿ ಪೂಜಾ ರಾವ್ ಮತ್ತು ಶ್ರೀ ಪ್ರದೀಪ್ ರಾವ್ ಅವರ ಪುತ್ರಿ) | 10 | 90% |
| 9. **ಮಹೇಶ್‌ಕುಮಾರ್ ಶಾಂತಕುಮಾರ್ ನಿಂಬಾಲ್**<br>(ಶ್ರೀಮತಿ ಸುಜಾತ ಶಾಂತಕುಮಾರ್ ನಿಂಬಾಲ್ ಮತ್ತು ಶ್ರೀ ಶಾಂತಕುಮಾರ್ ವೀರಣ್ಣ ನಿಂಬಾಲ್ ಅವರ ಪುತ್ರ) | 12 | 96.2 |
| 10. **ಕು. ಭಕ್ತಿ ಸಫಲ್ ಮಾನಕಪುರೆ**<br>ಶ್ರೀಮತಿ ನಯನಾ ಮಾನಕಪುರೆ ಮತ್ತು ಶ್ರೀ ಸಫಲ್ ಅನಂತ್ ಮಾನಕಪುರೆ ಅವರ ಪುತ್ರಿ | 12 | 95.5% |
| 11. **ನವಯುಗ್ ಶ್ರೀರಾಮ್**<br>(ಶ್ರೀಮತಿ ರೂಪಶ್ರೀ ಮತ್ತು ನರಸಿಂಹಮೂರ್ತಿ ಅವರ ಪುತ್ರ) | 12 | 94% |
| 12. **ಕು. ಶ್ರದ್ಧಾ ಆರ್. ಭಟ್**<br>(ಶ್ರೀಮತಿ ಸುಮಲತಾ ಕೆ ಮತ್ತು ಶ್ರೀ ರಾಮಕೃಷ್ಣ ಎನ್. ಅವರ ಪುತ್ರಿ) | 12 | 91.6% |
| 13. **ಅಹರ್ನಿಶ್ ಕೆ.ಎಸ್.**<br>(ಶ್ರೀಮತಿ ಕೆ.ಸಿ. ಆರಾಧನಾ ಮತ್ತು ಶ್ರೀ ಕೆ.ಎಸ್. ಮೂರ್ತಿ ಅವರ ಪುತ್ರ) | 12 | 90% |

**ಈ ಮೇಲಿನ ವಿದ್ಯಾರ್ಥಿಗಳಲ್ಲಿ ಹತ್ತು ಮಂದಿಯ ಭಾವಚಿತ್ರ ಮತ್ತು ವಿವರಗಳನ್ನು ಕಳೆದ ಬಾರಿಯ ಅಭಿಮತದ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಮತ್ತೆ ಬಂದ ಮೂವರು ವಿದ್ಯಾರ್ಥಿಗಳ ವಿವರ ಮತ್ತು ಭಾವಚಿತ್ರಗಳನ್ನು ಇದರೊಂದಿಗೆ ಪ್ರಕಟಿಸಲಾಗಿದೆ.**

# ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಪೊಳಲಿ ಪ್ರಶಸ್ತಿ



ದೆಹಲಿಯ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು)ದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ, ಜಾನಪದ ತಜ್ಞ ಹಾಗೂ ಸಂಸ್ಕೃತಿ ಚಿಂತಕರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು 2019ನೇ ಸಾಲಿನ ಪೊಳಲಿ ಶೀನಪ್ಪ ಹೆಗ್ಡೆ ಮತ್ತು ಎಸ್.ಆರ್. ಹೆಗ್ಡೆ ಇವರ ಜಂಟಿ ಹೆಸರಿನಲ್ಲಿ ನೀಡಲಾಗುವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯನ್ನು ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಮೂಲಕ ನೀಡಲಾಗುತ್ತದೆ. ಪ್ರಶಸ್ತಿಯು 20,000/- ರೂ. ನಗದು ಹಾಗೂ ಪ್ರಶಸ್ತಿ ಫಲಕವನ್ನೊಳಗೊಂಡಿರುತ್ತದೆ. ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆಗಸ್ಟ್ ತಿಂಗಳ ನಾಲ್ಕನೇ ದಿನಾಂಕದಂದು ಉಡುಪಿಯಲ್ಲಿ ನಡೆಯಲಿದೆ ಎಂದು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಸಂಯೋಜಕ ಪ್ರೊ. ವರದೇಶ ಹಿರೇಗಂಗೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೆಕೆಂಜಿ ಕೈಫಿಯತ್ತುಗಳು, ಲಿಂಗರಾಜನ ಹುಕುಂನಾಮೆ, ದಲಿತಜಗತ್ತು, ಬಂಡಾಯ ದಲಿತ ಸಾಹಿತ್ಯ, ಶಿಷ್ಟ ಪರಿಶಿಷ್ಟ, ಕರಾವಳಿ ಜಾನಪದ, ಕೂಡುಕಟ್ಟು, ಜನಸಂಸ್ಕೃತಿ, ಬಹುರೂಪ, ಮೆಲುದನಿ ಇವರ ಪ್ರಮುಖ ಕೃತಿಗಳು. 'ಕನ್ನಡ ಕಥನಗಳು', 'ವಲಸೆ, ಸಂಘರ್ಷ ಮತ್ತು ಸಮನ್ವಯ' ಹಾಗೂ ಕಾಗೆ ಮುಟ್ಟಿದ ನೀರು ಸದ್ಯದಲ್ಲಿಯೇ ಬಿಡುಗಡೆಯಾಗಲಿರುವ ಇವರ ಇತರ ಕೃತಿಗಳು.

ಡಾ. ಪುರುಷೋತ್ತಮ ಬಿಳಿಮಲೆಯವರು (ಆಗಸ್ಟ್ 21, 1955) ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಜದವರು. ಪುತ್ತೂರಿನ ವಿವೇಕಾನಂದ ಕಾಲೇಜಿನಲ್ಲಿ ಪದವಿ ಶಿಕ್ಷಣ ಪಡೆದ ಅವರು 1979ರಲ್ಲಿ ಮದರಾಸು ವಿಶ್ವವಿದ್ಯಾಲಯದಿಂದ ಚಿನ್ನದ ಪದಕದೊಂದಿಗೆ ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನೂ ಪಡೆದರು. 1984ರಲ್ಲಿ ಮಂಗಳೂರು ವಿಶ್ವವಿದ್ಯಾಲಯದಿಂದ ಪ್ರೊ. ವಿವೇಕ ರೈ ಅವರ ಮಾರ್ಗದರ್ಶನದಲ್ಲಿ ಡಾಕ್ಟರೇಟ್ ಪದವಿಯನ್ನೂ ಪಡೆದುಕೊಂಡರು. ಸುಳ್ಯದ ನೆಹರೂ ಮೆಮೋರಿಯಲ್ ಕಾಲೇಜು (1979-1984), ಮಂಗಳೂರು ವಿಶ್ವವಿದ್ಯಾಲಯ (1984-1992)ಮತ್ತು ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ (1992-1998)ಸೇವೆ ಸಲ್ಲಿಸಿದ ಡಾ. ಬಿಳಿಮಲೆಯವರು 1998ರಿಂದ ದೆಹಲಿಯ ಅಮೆರಿಕನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್‌ನ ನಿರ್ದೇಶಕರಾಗಿ ಕೆಲಸ ಮಾಡಿ, 2015ರಿಂದ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾಗಿ ಕನ್ನಡ ಕಟ್ಟುವ ಕೆಲಸದಲ್ಲಿ ನಿರತರಾಗಿದ್ದಾರೆ. 2002ರಿಂದ 2006ರ ನಡುವಣ ಅವಧಿಯಲ್ಲಿ ಅವರು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರೂ ಆಗಿ ಸೇವೆ ಸಲ್ಲಿಸಿದ್ದರು.

ಭಾರತೀಯ ಜಾನಪದವನ್ನು ಗಂಭೀರವಾಗಿ ಅಭ್ಯಸಿಸಿರುವ ಅವರು, ಅದರ ಮೂಲಕ ಭಾರತೀಯ ಸಂಸ್ಕೃತಿಯ ಅಧ್ಯಯನಕ್ಕೆ ಹೊಸ ವಿಸ್ತಾರ ತಂದು ಕೊಟ್ಟಿದ್ದಾರೆ. ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಮೂಲಕ ಕವಿರಾಜ ಮಾರ್ಗ, ಗದಾಯುದ್ಧಂ, ವಡ್ಡಾರಾಧನೆಗಳಂಥ ಅಭಿಜಾತ ಕನ್ನಡದ ಮಹತ್ವದ ಕೃತಿಗಳನ್ನು ಇಂಗ್ಲಿಷಿಗೆ ಅನುವಾದಿಸಿ ಪ್ರಕಟಿಸಿದ ಅವರು ಕಳೆದ ಸುಮಾರು 20 ವರ್ಷಗಳಿಂದ ದೇಶದ ರಾಜಧಾನಿಯಲ್ಲಿ ಕರ್ನಾಟಕದ ಧ್ವನಿಯನ್ನು ಸಶಕ್ತಗೊಳಿಸಲು ಕೆಲಸ ಮಾಡುತ್ತಲೇ ಬರುತ್ತಿದ್ದಾರೆ.

ಕರ್ನಾಟಕ ಜಾನಪದ ಅಕಾಡೆಮಿ, ಸಾಹಿತ್ಯ ಅಕಾಡೆಮಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳೂ ಸೇರಿದಂತೆ ಇವರಿಗೆ ಹಲವು ಪುರಸ್ಕಾರಗಳು ಸಂದಾಯವಾಗಿವೆ.

**ಡಾ. ಪುರುಷೋತ್ತಮ ಬಿಳಿಮಲೆಯವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.** •

# ಭಾರತೀಯ ಗ್ರಂಥಾಲಯ ಸಂಘದ ಅಧ್ಯಕ್ಷರಾಗಿ ಪ್ರೊ. ಬಿ.ಡಿ. ಕುಂಬಾರ್




ಭಾರತದಲ್ಲಿ ಗ್ರಂಥಪಾಲಕರ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಕರ ಅತಿ ದೊಡ್ಡ ಸಂಘಟನೆಯಾದ ಭಾರತೀಯ ಗ್ರಂಥಾಲಯ ಸಂಘ (ಐ.ಎಲ್.ಎ)ದ ನೂತನ ಅಧ್ಯಕ್ಷರಾಗಿ ಕನ್ನಡಿಗ ಪ್ರೊ. ಬಿ.ಡಿ. ಕುಂಬಾರ್ ಈಚೆಗೆ ಆಯ್ಕೆಯಾಗಿದ್ದಾರೆ.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿರುವ ಪ್ರೊ. ಕುಂಬಾರ್ ಅವರು ದೇಶ ವಿದೇಶಗಳ ವಿಚಾರ ಸಂಕಿರಣಗಳಲ್ಲಿ ಗ್ರಂಥಾಲಯ ತಜ್ಞರಾಗಿ ವಿಚಾರಗಳನ್ನು ಮಂಡಿಸಿದ್ದಾರೆ.

ದಿ.ಬಿ.ಎಸ್. ಕೇಶವನ್, ಪ್ರೊ. ಸಿ.ಆರ್. ಕರಿಸಿದ್ದಪ್ಪ, ಪ್ರೊ. ಮುತ್ತಯ್ಯ ಕೊಗನೂರುಮಠ ಮೊದಲಾದ ಕನ್ನಡಿಗರು ಈ ಹಿಂದೆ ಭಾರತೀಯ ಗ್ರಂಥಾಲಯ ಸಂಘವನ್ನು ಮುನ್ನಡೆಸಿದ ಉದಾಹರಣೆಗಳಿವೆ. ಭಾರತೀಯ ಗ್ರಂಥಾಲಯ ಸಂಘದ ಕಛೇರಿ ನವದೆಹಲಿಯ ಮುಖರ್ಜಿನಗರದಲ್ಲಿದೆ. ಪ್ರೊ. ಕುಂಬಾರ್ ಅವರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು.

*ಡಾ. ಅವನೀಂದ್ರನಾಥ್ ರಾವ್*




# ಎಂ. ವೀರಪ್ಪ ಮೊಯಿಲಿ ಅವರ ಬಾಹುಬಲಿ ಮಹಾಕಾವ್ಯ ಬಿಡುಗಡೆ

ಕರ್ನಾಟಕದ ಮಾಜಿ ಮುಖ್ಯ ಮಂತ್ರಿಗಳೂ, ಸಾಹಿತಿಯೂ ಆಗಿರುವ ಶ್ರೀ ಎಂ ವೀರಪ್ಪ ಮೊಯಿಲಿ ಅವರ ಹೊಸ ಮಹಾಕಾವ್ಯ ಬಾಹುಬಲಿ ಅಹಿಂಸಾ ದಿಗ್ವಿಜಯಂ ಕೃತಿಯ ಇಂಗ್ಲಿಷ್ ಅವತರಣಿಕೆಯು ದಿನಾಂಕ 14.06.2019ರಂದು ದೆಹಲಿಯ ಲೋದಿರಸ್ತೆಯಲ್ಲಿರುವ ಶ್ರೀಸತ್ಯ ಸಾಯಿ ಆಡಿಟೋರಿಯಂನಲ್ಲಿ ಬಿಡುಗಡೆಯಾಯಿತು. ಜೆ.ಎನ್.ಯು.ವಿನ ಪ್ರಾಧ್ಯಾಪಕ ಪ್ರೊ. ಎಚ್. ಎಸ್. ಶಿವಪ್ರಕಾಶ್ ಅವರು ಮೂಡಬಿದಿರಿಯ ಡಾ. ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಂಡಿತಚಾರ್ಯವರ್ಯ ಮಹಾಸ್ವಾಮಿಗಳು ಹಾಗೂ ದೆಹಲಿಯ ಆಚಾರ್ಯಶ್ರೀ ಪ್ರಗ್ಯಾ ಸಾಗರ್ ಮಹರಾಜ್ ಅವರ ಸಮ್ಮುಖದಲ್ಲಿ ಮಹಾಕಾವ್ಯವನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮಾತಾಡಿದ ಲೇಖಕ ಡಾ. ಮೊಯಿಲಿ ಅವರು 'ಭಾರತೀಯ ಚರಿತ್ರೆಯಲ್ಲಿ ಮಹತ್ವದ ಸ್ಥಾನ ಪಡೆದ ಬಾಹುಬಲಿಗೆ ಮಹಾಕಾವ್ಯ ನ್ಯಾಯ ಸಿಕ್ಕಿಲ್ಲವೆಂಬ ಶ್ರವಣಬೆಳಗೊಳದ ಸ್ವಾಮೀಜಿಯವರ ಒತ್ತಾಸೆಯಿಂದಾಗಿ, ನಾಲ್ಕೂವರೆ ವರ್ಷಗಳ ಹಿಂದೆ ತಪಸ್ಸಿನ ರೀತಿಯಲ್ಲಿ ಆರಂಭಿಸಿದ್ದ "ಬಾಹುಬಲಿ ಅಹಿಂಸಾ ದಿಗ್ವಿಜಯ" ಎಂಬ ಸುಮಾರು 650 ಪುಟಗಳ ಮಹಾಕಾವ್ಯ ಪೂರ್ಣಗೊಂಡಿದೆ. ವಿಶ್ವಶಾಂತಿಗೆ ಒತ್ತು ನೀಡಿ ಮಹಾಕಾವ್ಯಕ್ಕೆ ನ್ಯಾಯ ಒದಗಿಸುವ ಪ್ರಾಮಾಣಿಕ ಯತ್ನ ತೋರಿದ್ದೇನೆ.' ಎಂದು ಹೇಳಿದರು. ಅವರು ಮುಂದರಿದು–"ರಾಮಾಯಣ ಮಹಾನ್ವೇಷಣಂ" ಹಾಗೂ ದ್ರೌಪತಿಯ ಆತ್ಮಕಥೆಯ "ಸಿರಿಮುಡಿ ಪರಿಕ್ರಮ" ಎರಡು ಮಹಾಕಾವ್ಯಗಳ ನಂತರ ಇನ್ನಾವುದೇ ಮಹಾಕಾವ್ಯ ಬರೆಯುವುದು ಬೇಡವೆಂದು ನಿರ್ಧರಿಸಿದ್ದೆ. ಆದರೆ ಶ್ರವಣಬೆಳಗೊಳದ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಬಾಹುಬಲಿಗೆ ಕಾವ್ಯ ನ್ಯಾಯ ಸಿಕ್ಕಿಲ್ಲ. ಮಹಾಕಾವ್ಯ ಬರೆಯುವ ಮೂಲಕ ಕಾವ್ಯ ನ್ಯಾಯ ಒದಗಿಸಬೇಕೆಂದು ಹೇಳಿದ್ದರು. ಅವರ ಪ್ರೇರಣೆಯೊಂದಿಗೆ ಬಾಹುಬಲಿ ಮಹಾಕಾವ್ಯ ರಚನೆಯಲ್ಲಿ ತೊಡಗಿದ್ದೆ. 33 ಅಧ್ಯಾಯದ ಮಹಾಕಾವ್ಯ: ಬಾಹುಬಲಿ ಅಹಿಂಸಾ ದಿಗ್ವಿಜಯ ಮಹಾಕಾವ್ಯ ರಚನೆಗಿಳಿದಾಗ ಹಲವು ಗೊಂದಲ, ಆತಂಕ ಸೃಷ್ಟಿಯಾಗಿತ್ತು. ನಾನು ಮೆಚ್ಚುವ ಮೂಡಬಿದರೆಯ ರತ್ನಾಕರವರ್ಣಿ ಅವರು "ಭರತೇಶ ವೈಭವ" ಬರೆದಿದ್ದು, ಅದಕ್ಕೆ ವಿರುದ್ಧದಂತಿರಬಾರದು. ಮೂಲ ಆಶಯಕ್ಕೆ ಧಕ್ಕೆಯೂ ಬಾರದಂತೆ ಮಹಾಕಾವ್ಯ ರಚನೆ ಸವಾಲು ನನ್ನ ಮುಂದಿತ್ತು. ಇದಾವುದಕ್ಕೂ ಧಕ್ಕೆಯಾಗದಂತೆ ನನ್ನ ಆತ್ಮಸಾಕ್ಷಿಗೆ ವಿರುದ್ಧವಾಗದಂತೆ ಮಹಾಕಾವ್ಯ ರಚಿಸಿದ ತೃಪ್ತಿಯಂತೂ ಇದೆ.

ಮಹಾಕಾವ್ಯ ರಚನೆಗೆ ಇಳಿದಾಗ ನನ್ನ ಮನ ಸ್ವಯಂ ಪ್ರೇರಿತವಾಗಿ ಮಾಂಸಾಹಾರ ತ್ಯಜಿಸುವ ನಿರ್ಣಯ ಕೈಗೊಂಡಿತ್ತು. ಕೆಲ ದಿನಗಳ ಮಟ್ಟಿಗೆ ಮೊಟ್ಟೆ ಸೇವಿಸುತ್ತಿದ್ದೆ. ಅದು ಕೂಡ ನಿರಾಕರಣೆ ಮನೋಭಾವ ಮೂಡಿದ್ದರಿಂದ ನಾಲ್ಕೂವರೆ ವರ್ಷಗಳಿಂದ ಶುದ್ಧ ಸಸ್ಯಹಾರಿಯಾಗಿದ್ದೇನೆ ಎಂದು ಅವರು ಹೇಳಿದರು.

ಪುಸ್ತಕ ಬಿಡುಗಡೆ ಮಾಡಿ ಮಾತಾಡಿದ ಶಿವಪ್ರಕಾಶ್ ಅವರು ಮೊಯಿಲಿ ಅವರ ಸಾಧನೆಯನ್ನು ಅಭಿನಂದಿಸುತ್ತಾ, 'ಸಾಹಿತಿಯಾದವನು ಪುರಾಣ ಮತ್ತು ಇತಿಹಾಸವನ್ನು ವರ್ತಮಾನದ ಕಣ್ಣುಗಳಿಂದಲೇ ನೋಡುತ್ತಾನೆ, ಪಂಪನಿಂದ ಆರಂಭಗೊಂಡ ಈ ಪರಂಪರೆ ಮೊಯಿಲಿ ಅವರವರೆಗೆ ಮುಂದುವರಿದುಕೊಂಡು ಬಂದಿದೆ' ಎಂದು ಶ್ಲಾಘಿಸಿದರು.

ಮೂಡಬಿದಿರೆಯ ಚಾರುಕೀರ್ತಿ ಸ್ವಾಮೀಜಿ ಅವರು ಮಾತಾಡಿ, ಮೊಯಿಲಿ ಅವರು ತಮ್ಮ ಹುಟ್ಟಿದ ಊರಿಗೆ ಕೀರ್ತಿ ತಂದ ಮಹಾನುಭಾವ ಎಂದು ಕೊಂಡಾಡಿದರು. ಶ್ರೀ ಪ್ರಗ್ಯಾ ಸಾಗರ್ ಮಹರಾಜ್ ಅವರು ಜೈನ ಮತವು ಹೇಗೆ ವರ್ತಮಾನಕ್ಕೆ ಒಂದು ಪರ್ಯಾಯವಾಗಬಹುದು ಎಂದು ವಿವರಿಸಿ ಎಲ್ಲರನ್ನೂ ಹರಸಿದರು.

ದೆಹಲಿಯ ಶ್ರೀ ಲಾಲ್ ಬಹುದ್ದೂರ್ ಶಾಸ್ತ್ರಿ ಸಂಸ್ಕೃತ ವಿದ್ಯಾಪೀಠದ ಪ್ರಾಧ್ಯಾಪಕ ಹಾಗೂ ಡೀನ್ ಆಗಿರುವ ಪ್ರೊ. ಜಯಕುಮಾರ್ ಉಪಾಧ್ಯೆ ಅವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. •

## ರಂಗಸ್ವಾಮಿ ಅವರಿಗೆ ಬೀಳ್ಕೊಡುಗೆ



ದೆಹಲಿ ಪೋಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದ ಶ್ರೀ ರಂಗಸ್ವಾಮಿ ಅವರಿಗೆ ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯು ಬೀಳ್ಕೊಡುಗೆ ಸಮಾರಂಭವನ್ನು ಆಯೋಜಿಸಿತ್ತು. ದಿನಾಂಕ 09.06.2019ರಂದು ನಡೆದ ಈ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಭಾಗವಹಿಸಿ ಸಂಘದ ಪರವಾಗಿ ಅಭಿನಂದಿಸಿ ಆತ್ಮೀಯವಾಗಿ ಬೀಳ್ಕೊಟ್ಟರು.

# ಸಂಘದಲ್ಲಿ ಶ್ರೀ ನಾಗತಿಹಳ್ಳಿ ಚಂದ್ರಶೇಖರ್



ಹಿರಿಯ ಸಾಹಿತಿ, ಖ್ಯಾತ ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರು ದಿನಾಂಕ 07.07.2019ರಂದು ದೆಹಲಿ ಕರ್ನಾಟಕ ಸಂಘಕ್ಕೆ ಆಗಮಿಸಿದಾಗ ಅವರನ್ನು ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಪುಷ್ಪಗುಚ್ಛ ನೀಡಿ ಆತ್ಮೀಯವಾಗಿ ಸ್ವಾಗತಿಸಿದರು.



ಶ್ರೀ ನಾಗತಿಹಳ್ಳಿ ಚಂದ್ರಶೇಖರ್ ಅವರೊಂದಿಗೆ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಮತ್ತು ದೆಹಲಿ ಕನ್ನಡಿಗರು



ದೆಹಲಿ ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದ ಶ್ರೀ ರಂಗಸ್ವಾಮಿ ಅವರಿಗೆ ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯು ಬೀಳ್ಕೊಡುಗೆ ಸಮಾರಂಭವನ್ನು ಆಯೋಜಿಸಿತ್ತು. ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 09.06.2019ರಂದು ನಡೆದ ಕಾರ್ಯಕ್ರಮದಲ್ಲಿ ಸಮಿತಿಯ ಎಚ್.ಜಿ. ಶಿವರಾಮ್ ಮತ್ತು ಸದಸ್ಯರು ಅಭಿನಂದಿಸಿದ ಚಿತ್ರ.

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-

# ಸಂಘದಲ್ಲಿ ಗಿರೀಶ್ ಕಾರ್ನಾಡ್



ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ದಿ. ಎ.ಪಿ. ಕುಮಟಾಕರ್ ಅವರೊಂದಿಗೆ ಗಿರೀಶ್ ಕಾರ್ನಾಡ್ ಸಂತೋಷದ ಕ್ಷಣವೊಂದರಲ್ಲಿ. ಹಿರಿಯ ಕನ್ನಡಿಗ ದಿ. ಎನ್. ಜೆ. ಕಾಮತ್ ಅವರನ್ನೂ ಕಾಣಬಹುದು (1999).


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
PRINTING PRESS
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

Delhi Karnataka Sangha's Abhimatha
July-2019, Vol. No.29, Issue No.10, Price Rs.1/-
RNI Regn. No. 53405/91, DL-SW-1/4016/19-21
Date of Publication : July 8th / 9th, Posting Date :10th / 11th, Total Pages-20, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

## ಕಾರ್ನಾಡ್ ನಿರ್ಗಮನ




ದೆಹಲಿ ಕರ್ನಾಟಕ ಸಂಘ 1999ರಲ್ಲಿ ಗಿರೀಶ್ ಕಾರ್ನಾಡ್ ಅವರಿಗೆ ಅಭಿನಂದನೆ, ಅವರ ಸಾಹಿತ್ಯ ಕುರಿತ ವಿಚಾರ ಸಂಕಿರಣ, ರಂಗಗೀತೆ ಮತ್ತು ನಾಟಕಗಳನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದ ಬಳಿಕ ಸಂಘದಿಂದ ಕಾರ್ನಾಡ್ ನಿರ್ಗಮಿಸುತ್ತಿರುವಾಗ ಸಂಘದ ಅಂದಿನ ಅಧ್ಯಕ್ಷ ದಿ. ಕೆ.ಆರ್. ನಾಗರಾಜ್, ಕೋಶಾಧಿಕಾರಿ ಬಿ.ಪಿ. ಉತ್ತಪ್ಪ, ಮಾಜಿ ಉಪಾಧ್ಯಕ್ಷ ದಿ. ಭೀಮರಾವ್ ಮುರಗೋಡ ಜೊತೆಗಿದ್ದ ಅಪರೂಪದ ಭಾವಚಿತ್ರ (1999).